# ಸುಜ್ಞಾನ ಗ್ರಂಥ
## (ಸೊಲೊಮೋನನ ಜ್ಞಾನಗ್ರಂಥ)

### ಮುನ್ನುಡಿ

ಗ್ರೀಕ್ ದೇಶದ ಮುಖ್ಯ ಪಟ್ಟಣವಾದ ಅಲೆಕ್ಸಾಂಡ್ರಿಯಾದಲ್ಲಿ ವಾಸವಾಗಿದ್ದ ಒಬ್ಬ ಯೆಹೂದ್ಯನಿಂದ, ಮೂಲತಃ ಗ್ರೀಕ್ ಭಾಷೆಯಲ್ಲಿ ರಚಿತವಾದುದು ಈ ಗ್ರಂಥ. ಸೊಲೊಮೋನನನ್ನು ಕುರಿತ ಕೆಲವು ಪ್ರಸ್ತಾಪಗಳು (ಅಧ್ಯಾಯ 8.9–15; 9.7–8, 12ನ್ನು ನೋಡಿ) ಇದರಲ್ಲಿವೆ. ಆದರೂ ಕಾಲದೃಷ್ಟಿಯಿಂದಲು ಹಾಗು ವಿಷಯ ದೃಷ್ಟಿಯಿಂದಲು ಇದು ಸೊಲೊಮೋನನ ಕೃತಿಯಲ್ಲವೆಂಬುದು ಸ್ಪಷ್ಟ. ಕ್ರಿ.ಪೂ. ಮೊದಲನೆಯ ಶತಮಾನದ ಉತ್ತರಾರ್ಧದಲ್ಲಿ ಬರೆಯಲಾದ ಈ ಪುಸ್ತಕವನ್ನು ಹಳೇ ಒಡಂಬಡಿಕೆಯ ಕಾಲದ ಕಟ್ಟಕಡೆಯ ಗ್ರಂಥ ಎನ್ನಬಹುದು.

ಯೆಹೂದ್ಯರ ಸಾಂಪ್ರದಾಯಿಕ ವಸ್ತುವಿಷಯಗಳನ್ನು ಬಣ್ಣಿಸುವಾಗ ಗ್ರೀಕ್ ತತ್ವಶಾಸ್ತ್ರದ ವಿಚಾರಗಳು ಇಲ್ಲಿ ಬಳಕೆಯಾಗಿರುವುದನ್ನು ಗುರುತಿಸಬಹುದು. ಇಸ್ರಯೇಲ್ ನಾಡಿನ ಹೊರಗೆ ಜೀವನ ನಡೆಸುತ್ತಿದ್ದ ಯೆಹೂದ್ಯರನ್ನು ಪ್ರತ್ಯೇಕವಾಗಿ ಉದ್ದೇಶಿಸಿ ಇದನ್ನು ರಚಿಸಲಾಗಿದೆ. ತಮಗೆ ಪ್ರಾಮಾಣಿಕರಾಗಿರುವವರಿಗೆ ದೇವರು ತಕ್ಕ ಸಂಭಾವನೆ ನೀಡುತ್ತಾರೆಂಬ ಪಾಠವನ್ನು ಕಲಿಸುವುದೇ ಈ ಕೃತಿಯ ಧ್ಯೇಯ. ಈ ಗ್ರಂಥದಲ್ಲಿ ವಿವರಿಸಲಾಗಿರುವ "ಸುಜ್ಞಾನದ" ಗುಣಲಕ್ಷಣಗಳನ್ನು ಪರಮತ್ರಿತ್ವದ ಪವಿತ್ರಾತ್ಮರಿಗೆ ಅನ್ವಯವಾಗುವುದನ್ನು ಗಮನಿಸಬಹುದಾಗಿದೆ.

### ಪರಿವಿಡಿ


| | | | | |
|---|---|---|---|---|
| ಸಜ್ಜನರಿಗೆ ದೊರಕುವ ಅಮರತ್ವ, ದುರ್ಜನರಿಗಾಗುವ ದಂಡನೆ | – | 1.1 | – | 5.23 |
| ಸುಜ್ಞಾನದ ಶ್ಲಾಘನೆ | – | 6.1 | – | 9.18 |
| ದೇವಪ್ರಜೆಗೆ ರಕ್ಷೆ, ಶತ್ರುಗಳಿಗೆ ಶಿಕ್ಷೆ | – | 10.1 | – | 12.27 |
| ವಿಗ್ರಹಾರಾಧನೆಯ ಖಂಡನೆ | – | 13.1 | – | 15.13 |
| ಈಜಿಪ್ಟನ್ನು ಬಿಟ್ಟುಬಂದ ಇಸ್ರಯೇಲರಿಗಾದ ಒಳಿತುಗಳ ವಿವರಣೆ | – | 15.14 | – | 19.20 |


### ನ್ಯಾಯನೀತಿಯ ಅನ್ವೇಷಣೆ

**1** ಪೊಡವಿಯ ಪಾಲಕರೇ,
ನ್ಯಾಯ ನೀತಿಯನ್ನು ಪ್ರೀತಿಸಿರಿ
ಯಥಾರ್ಥಚಿತ್ತರಾಗಿ ಸರ್ವೇಶ್ವರನನ್ನು
ಧ್ಯಾನಿಸಿರಿ
ನಿಷ್ಕಪಟ ಮನಸ್ಸಿನಿಂದ ಆತನನ್ನು ಅರಸಿರಿ.
2 ಸರ್ವೇಶ್ವರನು ದರ್ಶನವೀಯುವುದು
ತನ್ನಲ್ಲಿ ಅಪನಂಬಿಕೆ ಪಡದವರಿಗೆ
ಸರ್ವೇಶ್ವರನನ್ನು ಅರಿತುಕೊಂಡವರು
ಅವರನ್ನು ಗುರಿಪಡಿಸರು ಪರೀಕ್ಷೆಗೆ.

3 ದುರಾಲೋಚನೆಗಳು ಮಾನವನನ್ನು
ದೂರಮಾಡುತ್ತವೆ ದೇವರಿಂದ
ದೇವರನ್ನು ಪರೀಕ್ಷಿಸಲೆತ್ನಿಸುವವನನ್ನು
ಹುಚ್ಚನನ್ನಾಗಿಸುತ್ತದೆ
ಆತನ ಶಕ್ತಿ ಸಾಮರ್ಥ್ಯ.
4 ಸುಜ್ಞಾನ ಪ್ರವೇಶಿಸದು ಕಪಟಾತ್ಮವನ್ನು
ಪಾಪಾಧೀನವಾದ ಹೃದಯದಲ್ಲಿ ಅದು
ತಂಗದು.
5 ಸುಶಿಕ್ಷಿತವಾದಾ ನಿರ್ಮಲ ಆತ್ಮ
ಮೋಸದೆಡೆ ನಿಲ್ಲದು
ಅವಿವೇಕ ಆಲೋಚನೆಗಳಿಂದದು
ಓಡಿಹೋಗುವುದು
ಅನ್ಯಾಯವು ಸಮೀಪಿಸಿದಾಗ ಅದು
ಅಸಹ್ಯಪಡುವುದು.

**ದೇವರಿಗೆ ತಿಳಿಯದಿರುವುದು ಯಾವುದೂ ಇಲ್ಲ**

6 ಸುಜ್ಞಾನವೆಂಬುದು ಮಾನವನನ್ನು
ಸ್ನೇಹಿಸುವ ಚೈತನ್ಯವು
ಆದರೆ ದೇವದೂಷಣೆ ಆಡುವವರನ್ನು
ಅದು ದಂಡಿಸದೆ ಬಿಡದು.
ಏಕೆಂದರೆ ಅಂತರಾಲೋಚನೆಗಳಿಗೆ
ದೇವರೇ ಸಾಕ್ಷಿ
ಆತ ಹೃದಯಗಳನ್ನೂ ವೀಕ್ಷಿಸುತ್ತಾನೆ
ಗಮನಿಸಿ
ನಾಲಿಗೆ ಆಡುವುದನ್ನು
ಅರ್ಥಮಾಡಿಕೊಳ್ಳುತ್ತಾನೆ ಚೆನ್ನಾಗಿ.
7 ಸರ್ವೇಶ್ವರನ ಚೈತನ್ಯ ವಿಶ್ವವನ್ನು ತುಂಬಿದೆ
ಸಮಸ್ತವನ್ನು ಒಟ್ಟಿಗೆ ಹಿಡಿದಿರುವ ಅದಕ್ಕೆ
ಪ್ರತಿಯೊಂದೂ ತಿಳಿದಿದೆ.
8 ಎಂದೇ ಅನ್ಯಾಯ ನುಡಿವವನು
ಬಾರದೆಹೋಗನು ಸುಜ್ಞಾನದ ಲಕ್ಷ್ಯಕೆ
ಅಂಥವನನು ದಂಡಿಸದೆ ಬಿಡದು
ನ್ಯಾಯನೀತಿಯು
ಅಪರಾಧವೆತ್ತಿ ತೋರುವ ಕಾಲಕೆ.
9 ದೇವಭಕ್ತಿಯಿಲ್ಲದವನ ಆಲೋಚನೆಗಳನ್ನು
ಪರೀಕ್ಷಿಸಲಾಗುವುದು
ಅವನ ಹೇಳಿಕೆಗಳ ವರದಿ ಸರ್ವೇಶ್ವರನನ್ನು
ಮುಟ್ಟುವುದು
ಅವನ ಅಕ್ರಮಗಳಿಗೆ ತಕ್ಕ ದಂಡನೆ
ವಿಧಿಸಲಾಗುವುದು.

10 ಎಲ್ಲವೂ ಕೇಳಿಸುತ್ತದೆ ಸರ್ವೇಶ್ವರನ
ಸೂಕ್ಷ್ಮವಾದ ಕಿವಿಗೆ
ಗೊಣಗುಟ್ಟುವ ಪ್ರತಿಯೊಂದು ಸದ್ದೂ
ಕೇಳಿಸದಿರದು ಅದಕ್ಕೆ.
11 ಮರೆಯಲ್ಲಿ ಆಡಿದ ಮಾತು
ಪರಿಣಾಮವಿಲ್ಲದೆ ಇರದು
ಹುಸಿಯಾಡುವ ಬಾಯಿ ನಾಶಕ್ಕೆ ಒಯ್ಯದೆ
ಇರದು.
ಆದ್ದರಿಂದ ವ್ಯರ್ಥವಾದ ಗೊಣಗಾಟದ
ಬಗ್ಗೆ ಎಚ್ಚರಿಕೆ!
ಸುಳ್ಳು ಆಪಾದನೆ ಮಾಡದಂತೆ
ಎಚ್ಚರವಹಿಸಲಿ ನಾಲಿಗೆ !

### ಮರಣಕ್ಕೆ ಕಾರಣ ದೇವರಲ್ಲ

12 ಅಕ್ರಮ ಜೀವನದಿಂದ
ಮರಣಕ್ಕೀಡಾಗಬೇಡ
ಸ್ವಕ್ರಿಯೆಗಳಿಂದ ವಿನಾಶ
ಬರಮಾಡಿಕೊಳ್ಳಬೇಡ.
13 ಏಕೆಂದರೆ ದೇವರು ಉಂಟುಮಾಡಿಲ್ಲ
ಮರಣವನ್ನು
ಆತ ನೋಡಿ ಹಿಗ್ಗುವವನಲ್ಲ
ಜೀವಿಗಳ ಸಾವನ್ನು.
14 ಅಸ್ತಿತ್ವದಲ್ಲಿರಲೆಂದೇ ದೇವ ಸೃಷ್ಟಿಸಿದನು
ಸಮಸ್ತವನ್ನು
ಸೃಷ್ಟಿಗಳಲ್ಲಿದೆ ಆರೋಗ್ಯ, ಅವುಗಳಲಿಲ್ಲ
ಮಾರಕ ವಿಷಯ
ಅಧೋಲೋಕಕ್ಕೆ ಈ ಲೋಕದ ಮೇಲಿಲ್ಲ
ಅಧಿಕಾರವು.
15 ಅಂತ್ಯವೆಂಬುದಿಲ್ಲ ನ್ಯಾಯನೀತಿಗೆ.
16 ತಮ್ಮ ನಡೆನುಡಿಗಳಿಂದಲೇ ಮರಣ
ತಂದುಕೊಂಡರು ದುರುಳರು
ಗೆಳೆಯನೋ ಎಂಬಂತೆ ಅದನ್ನು ಕೈಮಾಡಿ
ಕರೆದುಕೊಂಡರು
ಅದರೊಡನೆ ಸಂಧಾನ ಮಾಡಿಕೊಂಡರು,
ಅದರ ಮಿತ್ರರಾಗಲು ಅರ್ಹರವರು.

### ದುಷ್ಟರ ದುರಾಲೋಚನೆ

**2** ದೇವರಿಲ್ಲದವರು ಅಪವಾದಮಾಡಿ–
ಕೊಂಡರು ಈ ಪರಿ:

“ನಮ್ಮ ಬದುಕು ಅಲ್ಪಕಾಲಿಕ ಹಾಗು
ದುಃಖಕರ
ಮರಣಕ್ಕೆ ಮದ್ದಿಲ್ಲ, ಸತ್ತವರಿಂದ
ಹಿಂದಿರುಗಿದವರಿಲ್ಲ;
2 ನಮ್ಮ ಹುಟ್ಟು ಆಕಸ್ಮಿಕ
ಸತ್ತ ಮೇಲೆ ಆಗುತ್ತೇವೆ ಎಂದೂ
ಇಲ್ಲದವರಂತೆ
ನಮ್ಮ ಉಸಿರು ಬರೀ ಹೊಗೆ
ನಮ್ಮ ಬುದ್ಧಿ ಎದೆಬಡಿತದಿಂದಾದ
ಒಂದು ಕಿಡಿ.
3 ಕಿಡಿ ಆರಿಹೋದಾಗ ದೇಹವಾಗುತ್ತದೆ ಭಸ್ಮ
ತಿಳಿಗಾಳಿಯಲಿ ಕರಗಿಹೋಗುತ್ತದೆ ಪ್ರಾಣ.
4 ಕಾಲಗತಿಸಿದಂತೆ ಮರೆತುಹೋಗುತ್ತದೆ
ನಮ್ಮ ಹೆಸರೂ
ನಮ್ಮ ಕಾರ್ಯಸಾಧನೆಗಳನು ಸ್ಮರಿಸರು
ಯಾರೂ.
ಮೋಡದ ಸುಳಿವಿನಂತೆ ಮಾಯವಾಗುತ್ತದೆ
ಪ್ರಾಣ
ಅಟ್ಟಿಬಂದು ಕರಗಿಸುತ್ತದೆ ಆ ಮಂಜನ್ನು
ಸೂರ್ಯನ ಕಿರಣ.
5 ನೆರಳಿನಂತೆ ಮಾಯವಾಗುವುದು ನಮ್ಮ
ಬಾಳು
ಸತ್ತ ಮೇಲೆ ಹಿಂದಿರುಗಿ ಬರುವವರಲ್ಲ
ನಾವು
ಮರಣಮುದ್ರೆ ಬಿದ್ದ ಮೇಲೆ
ಮರಳುವುದಿಲ್ಲ ಯಾರೂ.
6 ಎಂದೇ ಬನ್ನಿ, ಇರುವ ಸುಖಭೋಗವನು
ಸವಿಯೋಣ
ಯುವಜನದಂತೆ ಜಗತ್ತಿನವುಗಳನು
ಅನುಭವಿಸೋಣ.
7 ಭರ್ತಿಯಾಗೋಣ ಉತ್ತಮ ಮದ್ಯದಿಂದ
ಅಲಂಕೃತರಾಗೋಣ ಸುಗಂಧ
ದ್ರವ್ಯಗಳಿಂದ
ವಸಂತಕಾಲದ ಪುಷ್ಪಗಳು ತಪ್ಪಿ
ಹೋಗದಿರಲಿ ನಮ್ಮಿಂದ.
8 ಗುಲಾಬಿ ಹೂ ಬಾಡಿಹೋಗುವ ಮುನ್ನ
ಮುಕುಟಮಾಡಿ ಮುಡಿದುಕೊಳ್ಳೋಣ.
9 ನಮ್ಮ ಆಡಂಬರದಿಂದ ಯಾರೂ
ತಪ್ಪಿಸಿಕೊಳ್ಳದಿರಲಿ
ನಮ್ಮ ಸಂಭ್ರಮದ ಸಂಕೇತ ಎಲ್ಲೆಲ್ಲೂ

ಕಂಡುಬರಲಿ
ಇದೇ ನಮ್ಮ ಪರಮಾನಂದ, ನಮ್ಮ
ಪಾಲಿಗೆ ಬಂದ ಬುತ್ತಿ.
10 ನೀತಿವಂತ ದಲಿತನನು ತುಳಿದುಬಿಡೋಣ
ವಿಧವೆಯನು ಎಡೆಬಿಡದೆ ಪೀಡಿಸೋಣ
ನರೆಗೂದಲಿನ ಮುದುಕನನ್ನೂ
ಸನ್ಮಾನಿಸದಿರೋಣ.
11 ನಮ್ಮ ಶಕ್ತಿಯೇ ನಮಗೆ ನೀತಿನಿಯಮ
ದುರ್ಬಲತೆಯಿಂದ ಏನೂ
ಪ್ರಯೋಜನವಿಲ್ಲ.
12 ನೀತಿವಂತನಿಗಾಗಿ ಹೊಂಚುಹಾಕೋಣ
ಬಲೆಯೊಡ್ಡಿ
ಅವನು ನಮಗೊಂದು ಪೀಡೆ, ನಮ್ಮ
ನಡತೆಗೆ ಅಡ್ಡಿ
ಆರೋಪಿಸುತ್ತಾನೆ, ಧರ್ಮಕ್ಕೆ ವಿರುದ್ಧ
ಪಾಪಕಟ್ಟಿಕೊಂಡೆವೆಂದು
ದೂಷಿಸುತ್ತಾನೆ, ಸಂಪ್ರದಾಯದ ವಿರುದ್ಧ
ಪಾಪ ಮಾಡಿದೆವೆಂದು.
13 ಹೇಳಿಕೊಳ್ಳುತ್ತಾನೆ ತಾನೇ ದೇವರನು
ಬಲ್ಲವನೆಂದು
ಕರೆದುಕೊಳ್ಳುತ್ತಾನೆ ತನ್ನನ್ನು ತಾನೇ
ದೇವರ ಮಗನೆಂದು.
14 ನಮ್ಮ ಆಲೋಚನೆಗಳನ್ನು ಆಕ್ಷೇಪಿಸುವ
ವ್ಯಕ್ತಿ ಅವನು
ಅವನನ್ನು ನೋಡಿದ್ದೇ ನಮ್ಮ ಉತ್ಸಾಹ
ಕುಂದಿಹೋಗುವುದು.
15 ಏಕೆಂದರೆ ಅವನು ಇತರರಂತೆ ಅಲ್ಲ
ಅವನ ಮಾರ್ಗವೋ ನಮಗೆ ವಿಚಿತ್ರ.
16 ಅವನ ಎಣಿಕೆಯಲ್ಲಿ ನಾವೆಲ್ಲರು ನಕಲಿ
ನಾಣ್ಯದಂತೆ
ನಮ್ಮಿಂದ ದೂರವಾಗುತ್ತಾನೆ
ಹೇಸಿಕೆಯನ್ನು ಕಂಡಂತೆ.
ನೀತಿವಂತರ ಮರಣ
ಸಂತೋಷಕರವೆನ್ನುತ್ತಾನೆ
ದೇವರೇ ತನ್ನ ತಂದೆಯೆಂದು
ಕೊಚ್ಚಿಕೊಳ್ಳುತ್ತಾನೆ.
17 ಅವನ ಮಾತುಗಳೇ ಸತ್ಯವೇನೋ
ನೋಡೋಣ
ಅವನ ಜೀವಾಂತ್ಯದ ಗತಿ
ಏನೆಂದು ಪರೀಕ್ಷಿಸೋಣ.

18 ನೀತಿವಂತ ದೇವಕುಮಾರನಾಗಿದ್ದರೆ
ದೇವರು ಅವನಿಗೆ ನೆರವಾಗಬೇಕು
ಶತ್ರುಗಳ ಕೈಯಿಂದ ಅವನನ್ನು ತಪ್ಪಿಸಿ
ಕಾಪಾಡಬೇಕು.
19 ಅಂಥವನನ್ನು ಹಿಂಸಿಸಿ, ಪೀಡಿಸಿ,
ಪರೀಕ್ಷಿಸೋಣ
ಅವನಲ್ಲಿ ಸೌಜನ್ಯ ಎಷ್ಟಿದೆಯೆಂದು
ತಿಳಿಯೋಣ
ಅನ್ಯಾಯದೆದುರು ತಾಳ್ಮೆಯೆಷ್ಟಿದೆಯೆಂದು
ಶೋಧಿಸೋಣ;
20 ಅವಮಾನಕರ ಮರಣಶಿಕ್ಷೆಯನ್ನು ಅವನಿಗೆ
ವಿಧಿಸೋಣ
'ದೇವರು ರಕ್ಷಿಸುತ್ತಾನೆ' ಎಂದಾಗಿತ್ತಲ್ಲವೇ
ಅವನ ವಾದ?"
21 ಈ ಪರಿ ಆಲೋಚಿಸಿ ವಂಚಿತರಾದರು
ದುರುಳರು
ಅವರ ದುಷ್ಟತನವೇ ಅವರನ್ನು
ಕುರುಡರನ್ನಾಗಿಸಿತು.
22 ದೇವರ ನಿಗೂಢ ಯೋಜನೆಯನ್ನು ಅವರು
ಅರಿಯಲಿಲ್ಲ
ಪವಿತ್ರ ಜೀವನಕ್ಕೆ ದೊರಕುವ ಫಲವನ್ನು
ಹಾರೈಸಲಿಲ್ಲ
ನಿರ್ದೋಷಿಗಳಿಗೆ ಸಂಭಾವನೆಯಿದೆಯೆಂದು
ನಂಬಲಿಲ್ಲ.
23 ದೇವರು ಮಾನವನನ್ನು ಸೃಷ್ಟಿಸಿದ್ದು
ಅಮರತ್ವಕ್ಕಾಗಿ
ಅವನನ್ನು ರಚಿಸಿದ್ದು ತಮ್ಮ
ಸ್ವರೂಪಕ್ಕನುಗುಣವಾಗಿ.
24 ಸೈತಾನನ ಮತ್ಸರದಿಂದಲೆ ಮರಣ
ಪ್ರವೇಶಿಸಿತು ಲೋಕವನು
ಅವನ ಪಕ್ಷಕೆ ಸೇರಿದವರೆಲ್ಲರು
ಅನುಭವಿಸುವರು ಅದನು.

## ಸಜ್ಜನರ ಸದ್ಗತಿ

**3** ಸಜ್ಜನರ ಆತ್ಮಗಳಿರುವುವು ದೇವರ
ಕೈಯೊಳು
ಅವರನ್ನು ಮುಟ್ಟದು ಮಹಾಯಾತನೆ
ಯಾವುದು.
2 ಮಂದಮತಿಯ ಕಣ್ಣಿಗೆ ಸತ್ತವರಂತೆ

ಅವರು ಕಾಣಿಸಿಕೊಂಡರು
ಅವರು ಗತಿಸಿ ಹೋದುದು ಅವನಿಂದ
ತೊಲಗಿದ ಕೇಡಂತಿತ್ತು.
3 ಸಜ್ಜನರಿಗಾದ ಸಾವು ಮಹಾ ವಿಪತ್ತು
ಎಂದವನಿಗೆ ತೋರಿತು
ಅವರಾದರೋ ಶಾಂತಿಸಮಾಧಾನದಿಂದ
ನೆಮ್ಮದಿಯಾಗಿರುವರು.
4 ಮಾನವನ ದೃಷ್ಟಿಯಲ್ಲಿ ಅವರು
ಕಂಡುಬಂದರು ಶಿಕ್ಷಿಸಲ್ಪಟ್ಟವರಂತೆ
ಅವರಲ್ಲಾದರೋ ತುಂಬಿತ್ತು ಅಮರತ್ವದ
ನಂಬಿಕೆ ನಿರೀಕ್ಷೆ.
5 ಅವರು ಅನುಭವಿಸಿದ ಶಿಕ್ಷೆ ಅಲ್ಪ,
ಹೊಂದುವ ಸೌಭಾಗ್ಯ ಅಪಾರ
ಶೋಧಿಸಿದ ತರುವಾಯ ದೇವರಿಗೆ ಅವರು
ಕಂಡುಬಂದರು ಯೋಗ್ಯಾರ್ಹ.
6 ಶೋಧಿಸಿದರವರನು ಪುಟಕ್ಕಿಟ್ಟ ಚಿನ್ನದಂತೆ
ಅಂಗೀಕೃತರಾದರು ಪೂರ್ಣ
ದಹನಬಲಿಯಂತೆ.
7 ಪ್ರಕಾಶಿಸುವರು ದೇವರನು ಸಂದರ್ಶಿಸುವ
ಕಾಲದಲಿ
ಹೊಳೆಯುವರು ಒಣಹುಲ್ಲಿನೊಳಗಿನ
ಕಿಡಿಗಳೋಪಾದಿ.
8 ನ್ಯಾಯತೀರಿಸುವರವರು ಜನಾಂಗಗಳಿಗೆ
ದೊರೆತನ ಮಾಡುವರವರು ಜನಗಳ ಮೇಲೆ
ದೇವರ ಪ್ರಜೆಗಳಾಗಿರುವರು ಸದಾಕಾಲಕೆ.
9 ಸತ್ಯವನು ಅರಿವರು ದೇವರಲಿ
ಭರವಸೆಯಿಡುವವರು
ಅವರೊಂದಿಗೆ ಪ್ರೀತಿಯಿಂದ ಬಾಳುವರು
ನಂಬಿಗಸ್ತರು.
ದೇವರಿಂದ ಆಯ್ಕೆಯಾದವರಿಗಿರುವುದು
ಕೃಪಾನುಗ್ರಹವು
ದೇವರೇ ಕಾಪಾಡುವರು ಸಜ್ಜನರನು.

**ದುರುಳರ ದುರ್ಗತಿ**

10 ಸಜ್ಜನರನು ತುಚ್ಛವಾಗಿ ಪರಿಗಣಿಸಿದವರು,
ಸರ್ವೇಶ್ವರನಿಗೆ ಇದಿರಾಗಿ
ಪ್ರತಿಭಟಿಸಿದವರು,
ತಮ್ಮ ವಾದಕ್ಕೆ ತಕ್ಕಂತೆ ಶಿಕ್ಷೆಗೆ
ಗುರಿಯಾಗುವರು.
11 ಜ್ಞಾನೋಪದೇಶವನು ತೃಣೀಕರಿಸುವವನು

ನಿರ್ಭಾಗ್ಯಸ್ತ
ಅವನ ನಂಬಿಕೆ ವ್ಯರ್ಥ, ದುಡಿತ ದುರ್ಲಭ,
ನಿಷ್ಪ್ರಯೋಜಕ.
12 ಅವರ ಮಡದಿಯರು ಮತಿಹೀನರು
ಅವರ ಮಕ್ಕಳು ದಾರಿತಪ್ಪಿದಂಥವರು
ಅವರ ಜನನವು ಶಾಪಗ್ರಸ್ತವಾದುದು.

ಸಂತಾನವಿಲ್ಲದಿದ್ದರೂ ಸದ್ಗುಣವಿರಬೇಕು

13 ವ್ಯಭಿಚಾರಕ್ಕೊಪ್ಪದ ನಿಷ್ಕಳಂಕಿ
ಬಂಜೆಯಾದರು ಧನ್ಯಳು !
ಸತ್ಯಾತ್ಮಗಳನು ದೇವರು
ಸಂದರ್ಶಿಸುವಾಗ ಫಲಪಡೆಯುವಳು.
14 ಅನ್ಯಾಯವೆಸಗದ, ಸರ್ವೇಶ್ವರನನು
ಪ್ರತಿಭಟಿಸದ, ನಪುಂಸಕನು ಧನ್ಯನು !
ಅವನ ನೀತಿಸತ್ಯತೆಗನುಸಾರ ಸಿಗುವುದು
ವಿಶೇಷ ಕೃಪಾವರವು;
ದೊರಕುವುದು ಪವಿತ್ರ ಸ್ಥಾನದಲಿ
ಸಂತೋಷಕರವಾದ ಅಂತಸ್ತು.
15 ಸತ್ಕಾರ್ಯಗಳ ಫಲವು
ಕೀರ್ತಿದಾಯಕವಾದುದು
ಅರಿವಿನ ಬೇರು ಎಂದಿಗೂ
ಒಣಗಿಹೋಗದು.
16 ವ್ಯಭಿಚಾರಿಗಳ ಮಕ್ಕಳು
ಅಭಿವೃದ್ಧಿಯಾಗರು
ಅಕ್ರಮ ಸಂಸರ್ಗದಿಂದಾದ
ಸಂತಾನ ನಾಶವಾಗುವುದು.
17 ಇಂಥವರು ಬಹುದಿನ ಬದುಕಿದರೂ
ಯಾರ ಗಣನೆಗೂ ಬಾರರು
ಮುದಿತನದಲ್ಲೂ ಅವರು
ಸನ್ಮಾನಹೀನರಾಗಿರುವರು.
18 ಚಿಕ್ಕವರಾಗಿಯೇ ಅವರು ಸತ್ತರೆ
ಯಾವ ನಿರೀಕ್ಷೆಯೂ ಇರದು
ನ್ಯಾಯನಿರ್ಣಯ ದಿನದಲ್ಲಿ
ಯಾವ ಆದರಣೆಯೂ ದೊರಕದು.
19 ದುರ್ಜನರ ಸಂತಾನದ ಅಂತ್ಯ
ಎಂದೆಂದಿಗೂ ಶೋಚನೀಯ.

**4** ಮಕ್ಕಳಿಲ್ಲದ ಸದ್ಗುಣಿಯ ಬಾಳು ಲೇಸು
ಸದ್ಗುಣ ಸ್ಮರಣೆಯಲೆ ಅಮರತ್ವ

ಅಡಗಿರುವುದು
ದೇವಮಾನವರ ಮುಂದೆ ಅದು
ಮನ್ನಣೆ ಪಡೆವುದು.
2 ಸದ್ಗುಣವು ಸಮೀಪವಿರುವಾಗ ಜನರು
ಅದನ್ನು ಅನುಸರಿಸುತ್ತಾರೆ.
ಅದು ದೂರಹೋಗಿಬಿಟ್ಟಾಗ
ಅದನ್ನು ಬಯಸುತ್ತಾರೆ.
ಅಮರ ಬಹುಮಾನಕ್ಕಾಗಿ ನಡೆವ
ಸ್ಪರ್ಧೆಯಲ್ಲಿ ಅದು ಜಯಗಳಿಸುತ್ತದೆ
ಎಲ್ಲ ಕಾಲದೊಳು ಅದು ಜಯಮಾಲೆ
ಹೊಂದಿ ಮೆರೆಯುತ್ತದೆ.
3 ದುರುಳರ ಬಹುಸಂಖ್ಯೆಯಲ್ಲಿ
ಲಾಭವೇನೂ ಇಲ್ಲ
ಆ ಕಳ್ಳ ಸಸಿಗಳು ಆಳವಾಗಿ
ಬೇರೂರುವುದಿಲ್ಲ
ಸ್ಥಿರವಾದ ನೆಲೆಯನ್ನು ಅವು
ಮಾಡಿಕೊಳ್ಳುವುದಿಲ್ಲ.
4 ಕೊಂಬೆಬಿಟ್ಟು ಕೆಲಕಾಲ ಚೆಂದವಾಗಿ
ಅವು ಬೆಳೆದರೂ
ನೆಲೆಯಿಲ್ಲದ ಕಾರಣ ಗಾಳಿಗೆ
ಹೊಯ್ದಾಡುವುವು
ರಭಸಗಾಳಿಗೆ ಬೇರುಸಹಿತ
ಕಿತ್ತುಬೀಳುವುವು.
5 ಬಲಿಯುವುದಕ್ಕೆ ಮುಂಚೆಯೇ
ಮುರಿಯುತ್ತವೆ ಆ ರೆಂಬೆಗಳು
ಯಾವ ಪ್ರಯೋಜನಕ್ಕೂ ಬಾರವು ಅದರ
ಹಣ್ಣಾಗದ ಕಾಯಿಗಳು.
6 ಹೆತ್ತವರ ತಪ್ಪನ್ನು ಪರಿಶೋಧಿಸುವ
ಕಾಲದಲಿ
ವ್ಯಭಿಚಾರಕ್ಕೆ ಹುಟ್ಟಿದ ಮಕ್ಕಳೇ
ನೀಡುವರು ಸಾಕ್ಷಿ.

**ಸಜ್ಜನರ ಅಕಾಲ ಮರಣ**

7 ಸಜ್ಜನನು ಕಾಲಕ್ಕೆ ಮುಂಚೆ ಸತ್ತರೂ
ವಿಶ್ರಾಂತಿಯನ್ನು ಕಳೆದುಕೊಳ್ಳನು.
8 ವರ್ಷಗಳು ಹೆಚ್ಚಾದಷ್ಟೂ ಘನತೆ
ಹೆಚ್ಚಾಗದು
ಕೇವಲ ದೀರ್ಘಾಯುಸ್ಸು
ಮುಪ್ಪಿಗೆ ಮಾನ್ಯತೆ ತರದು.
9 ಜ್ಞಾನಾರ್ಜನೆಯೇ ಮನುಷ್ಯನ

ನರೆಗೂದಲು
ನಿರ್ಮಲ ಜೀವನವೇ ವೃದ್ಧಾಪ್ಯದ ಗುರುತು.

### ಹನೋಕನ ಆದರ್ಶ

10 ದೇವರ ಮೆಚ್ಚಿಗೆಗೂ ಪ್ರೀತಿಗೂ
ಪಾತ್ರನಾದವನೊಬ್ಬನಿದ್ದನು.
ಪಾಪಿಗಳ ಮಧ್ಯೆ ವಾಸಿಸುವಾಗಲೆ
ಮೇಲಕ್ಕೊಯ್ಯಲ್ಪಟ್ಟನು.
11 ಕಾರಣ – ಕೇಡಿನಿಂದ ಅವನ ಬುದ್ಧಿ
ಮಾರ್ಪಡಬಾರದೆಂದು;
ಮೋಸದಿಂದ ಅವನ ಮನಸ್ಸು
ವಂಚಿತವಾಗಬಾರದೆಂದು.
12 ಕೆಟ್ಟತನದ ಮೋಹ ಒಳ್ಳೆಯವುಗಳನ್ನು
ಮಂಕಾಗಿಸುತ್ತದೆ
ದುರಾಶೆಯ ಭ್ರಮೆ ನಿರ್ಮಲ ಮನಸ್ಸನ್ನು
ಕೆಡಿಸುತ್ತದೆ.
13 ಅಲ್ಪಾವಧಿಯಲ್ಲೇ ಅವನು ಸಿದ್ಧಿಯನು
ಗಳಿಸಿದನು
ಸುದೀರ್ಘ ಜೀವನದ ಪುಣ್ಯವನು
ಸಂಪಾದಿಸಿದನು.
14 ಅವನ ಆತ್ಮ ಸರ್ವೇಶ್ವರನಿಗೆ
ಮೆಚ್ಚುಗೆಯಾಗಿತ್ತು
ಎಂತಲೆ ದುಷ್ಟರ ಮಧ್ಯೆಯಿಂದ ಅದನ್ನು
ಬೇಗನೆ ತೆಗೆಯಲಾಯಿತು.
15 ದೇವರ ಕೃಪಾಕರುಣೆ ಅವರಿಂದ
ಆಯ್ಕೆಯಾದವರಿಗೆ
ಅವರ ಪರಾಂಬರಿಕೆ ಅವರ ಭಕ್ತಾದಿಗಳ
ಮೇಲೆ.
ಇದನ್ನು ಕಂಡರೂ ಜನರು
ತಿಳಿದುಕೊಳ್ಳುವುದಿಲ್ಲ
ಅಂತರಾಳದಲ್ಲಿ ಅವರು
ಇಟ್ಟುಕೊಳ್ಳುವುದಿಲ್ಲ.
16 ಸತ್ತ ಸಜ್ಜನನು ಖಂಡಿಸುತ್ತಾನೆ ಜೀವಿಸುವ
ದುರ್ಜನರನು
ಅಂತೆಯೇ, ಅಲ್ಪಾವಧಿಯಲ್ಲೆ
ಸಿದ್ಧಿಸಾಧಿಸಿದಾ ಯುವಕನು
ಖಂಡಿಸುತ್ತಾನೆ ದೀರ್ಘಾಯುಸ್ಸಿನ ದುಷ್ಟ
ಮುದುಕನನು.
17 ಸಜ್ಜನನು ಯೌವನದಲ್ಲೇ ಸಾಯುವುದನು
ನೋಡುತ್ತಾರೆ ದುರುಳರು.

ಆದರೆ ಅವನ ಬಗ್ಗೆ ದೇವರ
ಚಿತ್ತವೇನೆಂಬುದನು ಅವರರಿಯರು.
ಅವನನ್ನು ಹೇಗೆ ಸುರಕ್ಷಿತನಾಗಿ
ಇರಿಸಿದ್ದರೆಂಬುದನೂ ಅರಿಯರು.
18 ಅವನ ಮರಣವನ್ನು ನೋಡಿ ಇವರು
ಜರೆಯುತ್ತಾರೆ
ಆದರೆ ದೇವರಿವರನ್ನು ಪರಿಹಾಸ್ಯ
ಮಾಡುತ್ತಾರೆ.
ದುರುಳರು ತಿರಸ್ಕೃತ ಶವಗಳಾಗುತ್ತಾರೆ
ಸತ್ತು ನಿತ್ಯದಂಡನೆಗೆ ಗುರಿಯಾಗುತ್ತಾರೆ.
19 ನೆಲಕ್ಕಪ್ಪಳಿಸಿ ಮೌನವಾಗಿಸುವನು
ದೇವರು ಅವರನು
ಬುಡದಿಂದಲೆ ಅವರನು ಅಲ್ಲಾಡಿಸುವನು.
ಸರ್ವನಾಶದ ದುಃಖ ಅವರದಾಗುವುದು
ಅವರ ಸ್ಮರಣೆಯೂ ಇಲ್ಲದಾಗುವುದು.
20 ದುರುಳರ ಪಾಪಗಳನ್ನು ಲೆಕ್ಕಿಸುವ
ಕಾಲದಲಿ
ಬರುವರವರು ಅಂಜುಬುರುಕರಾಗಿ
ಅವರ ದುಷ್ಕೃತ್ಯಗಳೇ ಸಾಕ್ಷಿನೀಡುವುವು
ಅವರಿಗಿದಿರಾಗಿ.

**5** ತರುವಾಯ ಸಜ್ಜನನು
ನಿಂತುಕೊಳ್ಳುವನು ಧೈರ್ಯದಿಂದ
ತನ್ನ ಕಾಡಿದವರ ಮುನ್ನ, ತನ್ನ ಕಾರ್ಯಗಳ
ತಿರಸ್ಕರಿಸಿದವರ ಮುನ್ನ.
2 ಆ ದುರುಳರು ಇದನ್ನು ನೋಡಿ
ಭಯಭ್ರಾಂತರಾಗುವರು
ಅವನು ಪಡೆದ ಅಪ್ರತ್ಯಕ್ಷ ರಕ್ಷಣೆಯನ್ನು
ಕಂಡು ಬೆರಗಾಗುವರು.
3 ಪಶ್ಚಾತ್ತಾಪಪಟ್ಟು ಆಂತರ್ಯದಲ್ಲಿ
ನೊಂದು ನರಳುತ್ತಾ ಹೀಗೆನ್ನುವರು:
"ನಾವು ಗೇಲಿಮಾಡಿ, ಅಪಹಾಸ್ಯಕ್ಕೀಡು
ಮಾಡಿದ ವ್ಯಕ್ತಿ ಇವನಲ್ಲವೆ?" ಎಂದು.
4 "ಮತಿಹೀನರಾದ ನಾವು ಇವನ ಜೀವನ
ಹುಚ್ಚುತನ ಎಂದೆವು
ಇವನ ಅಂತ್ಯ ಗೌರವಹೀನವಾದುದೆಂದು
ತಿಳಿದೆವು;
5 ಆದರೆ ಇವನು ದೇವರ ಕುವರರಲ್ಲೆ
ಗಣಿತನಾದುದು ಹೇಗೆ?
ಸಂತರಲಿ ಒಬ್ಬನಾಗಿ ಪರಿಗಣಿತನಾದುದು

ಹೇಗೆ?
6 ನಿಜವಾಗಿಯೂ ಸತ್ಯದ ಮಾರ್ಗ ಬಿಟ್ಟು
ಹೋದವರು ನಾವೇ
ನೀತಿಯ ಜ್ಯೋತಿ ಬೆಳಗಲಿಲ್ಲ,
ಸೂರ್ಯೋದಯವಾಗಲಿಲ್ಲ ನಮಗೆ.
7 ನಾವು ಸಂತುಷ್ಟರಾದುದು ಅಧರ್ಮದಲ್ಲಿ,
ವಿನಾಶದ ಮಾರ್ಗದಲ್ಲಿ
ದೇವರ ಮಾರ್ಗವನರಿಯದೆ ಅಲೆದೆವು
ಹಾದಿಗಳಿಲ್ಲದ ಕಾಡಿನಲ್ಲಿ.
8 ಅಹಂಕಾರದಿಂದ ನಮಗಾದ
ಲಾಭವಾದರೂ ಏನು?
ಸಿರಿಸಂಪತ್ತು, ಒಣಜಂಬ ತಂದ
ಭಾಗ್ಯವಾದರೂ ಏನು?
9 ಅವೆಲ್ಲವು ಸರಿದುಹೋದವು ನೆರಳಿನಂತೆ
ಹಾದುಹೋಗಿಬಿಟ್ಟವು ಗಾಳಿ ಸುದ್ದಿಯಂತೆ.
10 ಕಲ್ಲೋಲಕಡಲಿನಲಿ ತೇಲಿಹೋದ
ಕಪ್ಪಲಂತೆ ಕಣ್ಮರೆಯಾಯಿತಲ್ಲಾ
ಮುಂದೆ ಸಾಗಿಹೋದ ಮೇಲೆ ಅದರ
ಹಾದಿಯ ಕುರುಹೂ ಸಿಕ್ಕಲಿಲ್ಲ
ಅದರ ಅಡಿಮರದ ಗುರುತೂ ಆ ಅಲೆಗಳ
ಮಧ್ಯೆ ಕಾಣಿಸಲಿಲ್ಲ;
11 ಹಾರುವ ಹಕ್ಕಿಯ ರೆಕ್ಕೆ ಬಡಿತಕ್ಕೆ
ಗಾಳಿ ಸೀಳಿಹೋಗುತ್ತದೆ
ಗಾಳಿ ಮತ್ತೆ ಕೂಡಿಕೊಂಡು ಹಕ್ಕಿಹೋದ
ಜಾಡೇ ಕಾಣದಂತಾಗುತ್ತದೆ;
12 ಗುರಿಗೆ ಬಿಟ್ಟ ಬಾಣದಿಂದ
ಗಾಳಿ ಇಬ್ಭಾಗವಾಗುತ್ತದೆ
ಕೂಡಲೆ ಕೂಡಿಕೊಂಡು ಬಾಣಹೋದ
ಹಾದಿ ಅಗೋಚರವಾಗುತ್ತದೆ;
13 ಅಂತೆಯೇ, ಹುಟ್ಟಿದೊಡನೆಯೇ ನಾವು
ಇಲ್ಲದಂತಾದೆವಲ್ಲಾ
ತೋರಿಸಲು ಸದ್ಗುಣ ಯಾವುದರ
ಚಿಹ್ನೆಯೂ ನಮ್ಮಲ್ಲಿಲ್ಲ
ಅಧರ್ಮದಲ್ಲಿ ನಾವು
ಕ್ಷೀಣಿಸಿಹೋದೆವಲ್ಲಾ!
14 ಗಾಳಿಗೆ ತೂರಿಹೋಗುವ ಹೊಟ್ಟಿನಂತೆ
ಬಿರುಗಾಳಿಗೆ ಬಡಿದುಹೋದ ನೊರೆಯಂತೆ
ಗಾಳಿಗೆ ಚದರಿಹೋದ ಹೊಗೆಯಂತೆ
ಒಂದೇ ದಿನ ತಂಗಿಹೋದ ಅತಿಥಿಯಂತೆ
ಮಾಯವಾಗುವುದು ದುರ್ಜನರ ನಿರೀಕ್ಷೆ.

15 ಸಜ್ಜನರಾದರೋ ಬಾಳುವರು ಸದಾಕಾಲ
ದೇವರೇ ಅವರ ಬಹುಮಾನ,
ಮಹೋನ್ನತನೇ ಅವರ ಪಾಲಕ.
16 ರಾಜಭೂಷಣವಾದ ಕಿರೀಟವನು,
ಅಂದವಾದ ಮುಕುಟವನು
ಪಡೆವರವರು ಸರ್ವೇಶ್ವರನ ಕೈಯಿಂದ
ಆತ ರಕ್ಷಿಸುವನವರನು ತನ್ನ
ಭುಜಬಲದಿಂದ
ಕಾಪಾಡುವನವರನು ತನ್ನ ಬಲಹಸ್ತದಿಂದ.
17 ಸರ್ವೇಶ್ವರ, ಆಯುಧವಾಗಿಸಿಕೊಳ್ಳುವನು
ತನ್ನ ಆಗ್ರಹವನೆ
ವೈರಿಗೆ ಮುಯ್ಯಿ ತೀರಿಸಲು ತನ್ನ
ಸೃಷ್ಟಿಸಮಸ್ತವನೆ.
18 ಧರಿಸಿಕೊಳ್ಳುವನು ನ್ಯಾಯನೀತಿಯನ್ನು
ತನ್ನ ಕವಚವನ್ನಾಗಿ
ಯಥಾರ್ಥ ನ್ಯಾಯ ವಿವೇಚನೆಯನ್ನು ತನ್ನ
ಶಿರಸ್ತ್ರಾಣವನ್ನಾಗಿ.
19 ತೆಗೆದುಕೊಳ್ಳುವನು ಪವಿತ್ರತೆಯನ್ನು
ಅಜೇಯ ಗುರಾಣಿಯನ್ನಾಗಿ.
20 ಮಸೆಯುವನು ತೀಕ್ಷ್ಣವಾದ ಕೋಪವನು
ಖಡ್ಗವನ್ನಾಗಿ
ಮತಿಹೀನರೊಡನೆ ಹೋರಾಡುವುದು ಸೃಷ್ಟಿ,
ಆತನ ಪಕ್ಷ ವಹಿಸಿ.
21 ಸಿಡಿಲೆಂಬ ಬಾಣಗಳು ಗುರಿಹಿಡಿದು
ನೇರವಾಗಿ ತೆರಳುವುವು
ಮೋಡವೆಂಬ ಗಡುಸಾದ ಬಿಲ್ಲಿನಿಂದ
ಗುರಿಯೆಡೆಗೆ ಹಾರುವುವು
22 ಆಲಿಕಲ್ಲುಗಳು ಬೀಳುವುವು
ಕವಣೆಯ ಕಲ್ಲುಗಳಂತೆ ರಭಸವಾಗಿ
ಸಮುದ್ರದಲೆಗಳು ಕೋಪದಿಂದ
ಅಪ್ಪಳಿಸುವುವು ಅವರಿಗೆ ವಿರುದ್ಧವಾಗಿ
ಹುಚ್ಚುಹೊಳೆಗಳು ಅವರನ್ನು ಕೊಚ್ಚಿ
ಕೊಂಡು ಹೋಗುವುವು ಬಲವಾಗಿ.
23 ಬಿರುಗಾಳಿ ಬೀಸುವುದು ಅವರಿಗೆದುರಾಗಿ
ಹೊಟ್ಟಿನಂತೆ ತೂರಿಬಿಡುವುದವರನು
ತುಫಾನಾಗಿ.
ಈ ಪರಿ ಅಧರ್ಮ ಹಾಳುಮಾಡುವುದು,
ಧರೆಯನ್ನೆಲ್ಲಾ
ದುಷ್ಟತನ ಉರುಳಿಸುವುದು,
ರಾಜಸಿಂಹಾಸನಗಳನ್ನೆಲ್ಲಾ.

## ಸುಜ್ಞಾನಿಗಳಾಗಿರಲು ರಾಜರುಗಳಿಗೆ ಕರೆ

**6** ಆದುದರಿಂದ ಅರಸುಗಳೇ,
ಕೇಳಿ ತಿಳಿದುಕೊಳ್ಳಿ
ಜಗದ ನ್ಯಾಯಮೂರ್ತಿಗಳೇ,
ಅರ್ಥಮಾಡಿಕೊಳ್ಳಿ;
2 ಬಹುಜನಗಳ ಮೇಲೆ ದೊರೆತನ
ಮಾಡುವವರೇ, ಆಲಿಸಿ
ಅನೇಕ ರಾಷ್ಟ್ರಗಳ ಮೇಲೆ
ಹೆಚ್ಚಳಪಡುವವರೇ, ಕಿವಿಗೊಡಿ:
3 ನಿಮಗೆ ಒಡೆತನ ದೊರೆತದ್ದು
ಸರ್ವೇಶ್ವರನಿಂದ
ನಿಮ್ಮ ಪ್ರಭುತ್ವ ಬಂದುದು
ಆ ಮಹೋನ್ನತನಿಂದ.
ನಿಮ್ಮ ಕಾರ್ಯಗಳನ್ನು ಶೋಧಿಸುವವನು ಆತನೆ
ನಿಮ್ಮ ಸಂಕಲ್ಪಗಳನ್ನು ಪರಿಶೀಲಿಸುವವನು
ಆತನೆ.
4 ಆತನ ರಾಜ್ಯದ ರಾಯಭಾರಿಗಳು ನೀವೆಲ್ಲ:
ಸರಿಯಾಗಿ ನೀವು ನ್ಯಾಯತೀರಿಸಲಿಲ್ಲ
ಆತನ ಆಜ್ಞೆಗಳನ್ನು ಪರಿಪಾಲಿಸಲಿಲ್ಲ
ಆ ದೇವರ ಸಂಕಲ್ಪದಂತೆ
ನಡೆದುಕೊಳ್ಳಲಿಲ್ಲ.
5 ಆತ ನಿಮ್ಮ ಮೇಲೆರಗುವನು ತ್ವರೆಯಾಗಿ,
ಭೀಕರವಾಗಿ
ಉನ್ನತಸ್ಥಾನದಲ್ಲಿರುವ ನಿಮಗೆ
ತೀರ್ಪಿಡುವನು ಕ್ರೂರವಾಗಿ.
6 ದೀನರಿಗೆ ದಯಾಪೂರಿತ ಕ್ಷಮೆ
ದೊರಕಬಹುದು
ಬಲಾಢ್ಯರಿಗಾದರೋ ಕಠಿಣಪರೀಕ್ಷೆ
ಕಾದಿರುವುದು.
7 ಸರ್ವರಿಗೂ ದೊರೆಯಾದ ಸರ್ವೇಶ್ವರ
ಮುಖದಾಕ್ಷಿಣ್ಯ ತೋರುವವನಲ್ಲ
ದೊಡ್ಡಸ್ತಿಕೆಯನ್ನು ಗಮನಿಸುವವನಲ್ಲ.
ಹಿರಿದುಕಿರಿದುಗಳೆರಡನ್ನು ಮಾಡಿದಾತ
ಎಲ್ಲರನ್ನು ಸಮನಾಗಿ ನೋಡಿಕೊಳ್ಳಬಲ್ಲ.
8 ಆದರೂ ಬಲವಂತರಿಗಾಗುವ ಪರೀಕ್ಷೆ
ಇರುವುದು ಕಠಿಣತರವಾಗಿಯೇ.
9 ಎಂದೇ ಅರಸುಕುವರರೇ,
ನನ್ನೀ ಬೋಧನೆಗಳೆಲ್ಲ ನಿಮಗಾಗಿಯೇ;
ಸುಜ್ಞಾನಿಗಳಾಗಿ, ನೀವು ಸನ್ಮಾರ್ಗ

ಬಿಡಬಾರದೆಂದೇ ಇದ ನುಡಿದಿರುವೆ.
10 ಶುದ್ಧಾಚಾರಗಳನ್ನು ಶ್ರದ್ಧೆಯಿಂದ
ಪಾಲಿಸಿದರೆ ಪರಿಶುದ್ಧರಾಗುವರು
ಅವುಗಳಲ್ಲಿ ಸುಶಿಕ್ಷಿತರಾದವರು
ಸರಿಯಾಗಿ ಉತ್ತರಿಸಬಲ್ಲರು.
11 ಆದುದರಿಂದ ನನ್ನೀ ನುಡಿಗಳನು ಬಯಸಿರಿ,
ಅವುಗಳಿಗಾಗಿ ಹಂಬಲಿಸಿರಿ;
ಆಗ ಸುರಕ್ಷಿತರಾಗುವಿರಿ.

### ಸುಜ್ಞಾನದ ಮೌಲ್ಯ

12 ಸುಜ್ಞಾನವೆಂಬಾಕೆ ತೇಜೋ ಪುಂಜಳಾಗಿ
ಇರುವಳು, ಅವಳ ಕಾಂತಿ ಕುಂದದು.
ಪ್ರೀತಿಸುವವರಿಗೆ ಸಹಜವಾಗಿ ಗೋಚರ
ಆಗುವಳು, ಅರಸುವವರಿಗೆ ಸಿಕ್ಕುವಳು.
13 ತನ್ನನ್ನು ತಿಳಿಯಲಪೇಕ್ಷಿಸುವವರ ಹತ್ತಿರಕೆ
ತಾನೇ ಬಂದು ತಿಳಿಯಪಡಿಸಿಕೊಳ್ಳುತ್ತಾಳೆ.
14 ಅವಳನ್ನು ಹುಡುಕಲು ನಸುಕಿನಲೇ
ಏಳುವ ಪರಿಶ್ರಮ ಬೇಡ;
ಕಾರಣ – ತನ್ನ ಬಾಗಿಲಲೇ ಅವಳು
ಕುಳಿತಿರುವುದನ್ನು ಕಾಣುವನಾತ.
15 ಅವಳ ಮೇಲೇ ನಿಗವಿಟ್ಟಿರುವವನು
ಬುದ್ಧಿಸಂಪನ್ನನಾಗುವನು
ಅವಳನ್ನೇ ಕಾಯ್ದಿರುವವನು ಚಿಂತೆಯಿಂದ
ಬೇಗ ಮುಕ್ತನಾಗುವನು.
16 ಸುಜ್ಞಾನ ತನಗೆ ಯೋಗ್ಯರಾದವರನು
ಅರಸುತ್ತಾ ಸಂಚರಿಸುತ್ತಾಳೆ
ಹಾದಿಯಲ್ಲೇ ಅವರಿಗೆ ಪ್ರಸನ್ನಳಾಗಿ
ಕಾಣಿಸಿಕೊಳ್ಳುತ್ತಾಳೆ
ಅವರ ಪ್ರತಿಯೊಂದು ಆಲೋಚನೆಯಲ್ಲೂ
ಅವರೊಂದಿಗಿರುತ್ತಾಳೆ.
17 ಕಲಿಯಬೇಕೆಂಬ ನೈಜ ಆಕಾಂಕ್ಷೆಯೇ
ಸುಜ್ಞಾನದ ಉಗಮ
ಕಲಿಕೆಯ ಬಗ್ಗೆ ಇರುವ ಆಸಕ್ತಿಯೆ
ಸುಜ್ಞಾನದ ಪ್ರೇಮ.
18 ಸುಜ್ಞಾನದ ಪ್ರೇಮ, ಅದರ ನಿಯಮಗಳ
ಅನುಸರಣ,
ಆ ನಿಯಮಗಳ ಪರಿಪಾಲನ –
ಇವುಗಳಿಂದ ಅಮರತ್ವವು ಪ್ರಾಪ್ತ.
19 ಅಮರತ್ವವು ಮಾನವನನ್ನು ದೇವರ
ಸಾಮಿಪ್ಯಕ್ಕೊಯ್ಯುತ್ತದೆ.

20 ಹೀಗೆ ಜ್ಞಾನಾಭಿರುಚಿ ಅರಸೊತ್ತಿಗೆಗೆ
ಏರಿಸುತ್ತದೆ.
21 ಆದುದರಿಂದ ಜನಾಧಿಪತಿಗಳೇ,
ಸಿಂಹಾಸನದಲಿ, ರಾಜದಂಡದಲಿ
ಆನಂದಿಸಬೇಕಾದರೆ
ಸುಜ್ಞಾನ ಪ್ರಭೆಯನು ಸನ್ಮಾನಿಸಿರಿ;
ಆಗ ನೀವು ಚಿರಕಾಲ ಆಳುವಿರಿ.

### ಸುಜ್ಞಾನದ ವಿವರಣೆ

22 ಸುಜ್ಞಾನವೆಂದರೇನು? ಅದು
ಉಗಮವಾದುದು ಹೇಗೆ?
ಹೇಳುತ್ತೇನೆ ಕೇಳಿ: ನಿಮ್ಮಿಂದ
ರಹಸ್ಯಗಳನ್ನು ಮರೆಯಾಗಿಸಲಾರೆ"
ಸೃಷ್ಟಿಯ ಆದಿಯಿಂದ ಆಕೆಯ
ಮಾರ್ಗವನ್ನು ವ್ಯಕ್ತಪಡಿಸುವೆ
ಸತ್ಯವನ್ನು ಉಪೇಕ್ಷಿಸದೆ,
ತಿಳಿದಷ್ಟು ಮಟ್ಟಿಗೆ ವಿವರಿಸುವೆ.
23 ಇದರಿಂದ ಅಸೂಯೆಪಡಬೇಕೆಂಬ
ಉದ್ದೇಶವೇನೂ ನನಗಿಲ್ಲ
ಅಸೂಯೆಯೂ ಜ್ಞಾನವೂ
ಬೆರೆಯುವುದಿಲ್ಲ.
24 ಸುಜ್ಞಾನಿಗಳ ಸಂಖ್ಯೆ ಹೆಚ್ಚಿದಷ್ಟೂ
ವಿಶ್ವಕ್ಕೆ ಹೆಚ್ಚು ಸಂರಕ್ಷಣೆ
ವಿವೇಕಿಯಾದ ಅರಸ ಶಾಂತಿಪ್ರದ
ನಾಗುವನು ತನ್ನ ಪ್ರಜೆಗಳಿಗೆ.
ಎಂದೇ ಶಿಕ್ಷಣ ಪಡೆ ನನ್ನ ನುಡಿಗಳಿಂದ
ನಿನಗೆ ಪ್ರಯೋಜನವಿದೆ ಅವುಗಳಿಂದ.

### ರಾಜನಾದರೂ ತಾಯಿಗೆ ಮಗ

**7** ಎಲ್ಲರಂತೆ ನಾನೂ ಸಾಯುವಂಥವನು,
ಮರ್ತ್ಯನು,
ಮಣ್ಣಿನಿಂದ ರೂಪಿತನಾಗಿ ಮಾನವಕುಲಕ್ಕೆ
ಸೇರಿದವನು.
2 ಮನುಷ್ಯನ ವೀರ್ಯದ ಹಾಗು ದಾಂಪತ್ಯ
ಭೋಗದ ಪರಿಣಾಮ ನಾನು
ಹತ್ತು ತಿಂಗಳ ಅವಧಿಯಲಿ,
ತಾಯಿಯ ಉದರದಲಿ,
ನನ್ನೀ ದೇಹರೂಪಿತವಾಯಿತು.
3 ಹುಟ್ಟಿದಾಗ ಇತರರಂತೆ ಗಾಳಿಯನೆ

ಉಸಿರಾಡಿದೆ
ಭೂತಾಯಿಯ ಮಡಿಲಿನಲಿ ಬೆಳೆದುಬಂದೆ
ನನ್ನ ಮೊದಲ ಧ್ವನಿ ಅಳುವಾಗಿತ್ತು
ಇತರ ಮಕ್ಕಳಂತೆ.
4 ಬಟ್ಟೆ ಸುತ್ತಿ ನನ್ನ ಆರೈಕೆ ಮಾಡಿದರು
ಎಚ್ಚರಿಕೆಯಿಂದ.
5 ಇನ್ನಾವ ಅರಸನ ಹುಟ್ಟೂ
ಬೇರೆಯಾಗಿರಲಿಲ್ಲ ಇದಕ್ಕಿಂತ.
6 ಜೀವನದಲಿ, ಬರುವುದಕ್ಕೂ
ತೆರಳುವುದಕ್ಕೂ
ಇರುವುದು ಒಂದೇ ದಾರಿ ಎಲ್ಲರಿಗೂ.

ಸುಜ್ಞಾನಕ್ಕೆ ಸಲ್ಲತಕ್ಕ ಮರ್ಯಾದೆ
7 ಇಂತಿರಲು ನಾನು ಮಾಡಿದೆ ಪ್ರಾರ್ಥನೆ
ಕೊಡಲಾಯಿತು ನನಗೆ ತಿಳುವಳಿಕೆ
ನಾನು ಮೊರೆಯಿಟ್ಟೆ ದೇವರಿಗೆ
ಸುಜ್ಞಾನವೆಂಬ ಚೈತನ್ಯೆ ಬಂದಳು ನನ್ನ
ಬಳಿಗೆ.
8 ರಾಜದಂಡ, ಸಿಂಹಾಸನಕ್ಕೂ ಮಿಗಿಲಾಗಿ
ಅವಳನ್ನು ಇಷ್ಟಪಟ್ಟೆ
ಅವಳ ಮುಂದೆ ಸಿರಿಸಂಪತ್ತು
ಶೂನ್ಯವೆಂದು ಅರಿತುಕೊಂಡೆ.
9 ಅವಳ ಮುಂದೆ, ಭೂಮಿಯ ಚಿನ್ನವೆಲ್ಲ
ಉಸುಬಿನ ಕಣದಂತೆ,
ಅಮೂಲ್ಯ ರತ್ನವು ಸಾಟಿಯಲ್ಲ,
ಬೆಳ್ಳಿಯೂ ಮಣ್ಣಿನ ಮುದ್ದೆಯಂತೆ.
10 ಆರೋಗ್ಯ ಸೌಂದರ್ಯಗಳಿಗಿಂತ ಹೆಚ್ಚಾಗಿ
ಅವಳನ್ನು ಪ್ರೀತಿಸಿದೆ
ಬೆಳಕಿಗಿಂತ ಅವಳ ಕುಂದದ ಕಾಂತಿಯನ್ನೇ
ಆಯ್ದುಕೊಂಡೆ.
11 ಅವಳೊಂದಿಗೆ ಉತ್ತಮ ವಸ್ತುಗಳೆಲ್ಲವೂ
ಬಂದವು
ಅವಳ ಕೈಯಲ್ಲಿತ್ತು ಅಗಣಿತವಾದ
ಐಶ್ವರ್ಯವು.
12 ಇವುಗಳನ್ನೆಲ್ಲಾ ಅವಳು ತಂದುದರಿಂದ
ಆನಂದವಾಯಿತೆನಗೆ
ಆಕೆಯೇ ಇವುಗಳ ಜನನಿಯೆಂದು
ತಿಳಿದಿರಲಿಲ್ಲ ನನಗೆ.
13 ಕಪಟವಿಲ್ಲದೆ ನಾ ಕಲಿತುಕೊಂಡೆ
ಮತ್ಸರವಿಲ್ಲದೆ ನಾ ಕಲಿಸಿಕೊಡುವೆ

ಅವಳ ಸಿರಿಯನು ನಾ ಮರೆಯಾಗಿಸೆ.
14 ಆಕೆ ಎಂದೂ ತೀರಿಹೋಗದ ನಿಧಿ
ಮಾನವನಿಗೆ
ಗಿಟ್ಟುವುದು ದೇವರ ಪ್ರೀತಿ ಆಕೆಯನ್ನು
ಬಳಸುವವರಿಗೆ
ದೇವರ ಅನುಮತಿಯಿದೆ ಆಕೆಯಿಂದ
ಕಲಿಯುವವರಿಗೆ.
15 ದೇವರು ನೀಡಲೆನಗೆ ಶಕ್ತಿ
ನ್ಯಾಯವಾದುದನೆ ನುಡಿಯಲಿಕೆ
ನನಗಿತ್ತ ಕೊಡುಗೆಗಳಿಗೆ ಅನುಗುಣವಾಗಿ
ಆಲೋಚಿಸಲಿಕೆ.
ಸುಜ್ಞಾನಿಯ ಮಾರ್ಗದರ್ಶಕ, ಜ್ಞಾನಿಗಳ
ನಿರ್ದೇಶಕ ಆತನೇ.
16 ನಾವು, ನಮ್ಮ ನುಡಿಗಳು, ಎಲ್ಲ
ವಿವೇಕವು,
ಕಲಾಕೌಶಲ್ಯವು, ಜ್ಞಾನಸರ್ವವು
ಆತನಿಗೆ ಅಧೀನವು.
17 ಸಕಲ ವಸ್ತುಗಳ ನೈಜ ಜ್ಞಾನವನು
ನನಗಿತ್ತವನು ದೇವರೇ
ವಿಶ್ವದ ರಚನೆ, ಪಂಚಭೂತಗಳ
ವ್ಯವಹಾರ, ತಿಳಿಸಿದವ ಆತನೆ.
18 ಕಾಲಗಳ ಆದಿಮಧ್ಯಾಂತರಗಳನು,
ಋತುಗಳ ಬದಲಾವಣೆಗಳನು,
ಉತ್ತರಾಯಣ, ದಕ್ಷಿಣಾಯಣಗಳನು,
19 ತಾರಾಗಣಗಳ ವಿನ್ಯಾಸವನು,
ವರ್ಷಗಳ ಚಲಾವಣೆಗಳನು,
20 ಪ್ರಾಣಿಗಳ ಲಕ್ಷಣಗಳನು,
ಕಾಡುಮೃಗಗಳ ಉಗ್ರತೆಗಳನು,
ಗಾಳಿಗಳ ಭೀಕರತೆಯನು,
ಮಾನವನ ವೈಚಾರಿಕತೆಗಳನು,
ಗಿಡಬೇರುಗಳ ಗುಣಗಳನು,
ಸಸ್ಯಾದಿಗಳ ವೈವಿಧ್ಯತೆಗಳನು,
ಇವುಗಳನ್ನೆಲ್ಲ ನನಗೆ ತಿಳಿಯಪಡಿಸಿದವನು
ಆತನೆ.
21 ವಿಶ್ವದ ಶಿಲ್ಪಿಯಾದ ಸುಜ್ಞಾನಿಯೇ ನನಗೆ
ಬೋಧಿಸಿದ್ದರಿಂದ
ನಾನು ತಿಳಿದುಕೊಂಡೆ ಗೋಚರ,
ಅಗೋಚರ ಸಂಗತಿಗಳನ್ನೆಲ್ಲಾ.

### ಸುಜ್ಞಾನದ ಮಹತ್ವ

22 ಸುಜ್ಞಾನದಲ್ಲಿ ಚುರುಕಾಗಿ ಅರಿಯುವ
ಹಾಗೂ ಪವಿತ್ರವಾದ
ಚೈತನ್ಯವಿರುವುದು;
ಅದು ಅದ್ವಿತೀಯ, ನಾನಾವಿಧ,
ಅತಿಸೂಕ್ಷ್ಮ ಹಾಗು ಚಲಿಸುವಂಥದ್ದು;
ಅದು ಸ್ಪಷ್ಟೋಕ್ತಿಯುಳ್ಳದು,
ನಿಷ್ಕಳಂಕವಾದುದು,
ಸುರಕ್ಷಿತವಾದುದು, ನಿಚ್ಚಳವಾದುದು,
ಸತ್ವರವಾದುದು, ಹದವಾದುದು;
23 ನಿರಾತಂಕವಾದುದು, ಕರುಣಾಮಯಿ,
ಮಾನವಪ್ರಿಯವಾದುದು;
ಸುಸ್ಥಿರ, ನಿಶ್ಚಿತ, ನಿಶ್ಚಿಂತೆಯುಳ್ಳದ್ದು,
ಸರ್ವಶಕ್ತಿಯುಳ್ಳದ್ದು,
ಚುರುಕು, ನಿರ್ಮಲ, ಸೂಕ್ಷ್ಮ, ಎಲ್ಲ
ಜೀವಾತ್ಮಗಳಲ್ಲಿ
ಸೇರಿಕೊಳ್ಳುವಂಥದ್ದು.
24 ಸುಜ್ಞಾನ ಎಲ್ಲಾ ಚಲನೆಗಿಂತಲು ಚುರುಕು
ಇಡೀ ವಿಶ್ವದಲ್ಲಿ ವ್ಯಾಪಿಸಿಕೊಳ್ಳುವಷ್ಟು
ಸ್ವಚ್ಛವಾದುದು.
25 ಆಕೆ ದೇವರ ಶಕ್ತಿಯ ಉಸಿರು,
ಸರ್ವಶಕ್ತನ ನಿರ್ಮಲ ಪ್ರವಾಹ.
ಎಂದೇ ಆಕೆಯಲ್ಲಿ ಅಶುದ್ಧವಾದುದು
ಯಾವುದೂ ಪ್ರವೇಶಿಸುವಂತಿಲ್ಲ.
26 ಸುಜ್ಞಾನವು ಅನಾದಿ, ಪರಂಜ್ಯೋತಿಯ
ಪ್ರಕಾಶ
ದೈವಪ್ರವೃತ್ತಿಯ ನಿಷ್ಕಳಂಕ ದರ್ಪಣ
ದೇವರ ಶ್ರೇಷ್ಟತೆಯ ಪ್ರತಿರೂಪ.
27 ಒಂಟಿಯಾಗಿದ್ದುಕೊಂಡು ಎಲ್ಲವನ್ನು
ಆಕೆ ಮಾಡಬಲ್ಲಳು
ತನ್ನತನವನ್ನು ಕಳೆದುಕೊಳ್ಳದೆ ಎಲ್ಲವನ್ನು
ಹೊಸದಾಗಿಸುವಳು.
ಪ್ರತಿಯೊಂದು ಪೀಳಿಗೆಯಲ್ಲೂ ಸಂಚರಿಸಿ,
ಸಂತಾತ್ಮಗಳನ್ನು ಹೊಕ್ಕು,
ಮಾನವರನ್ನು ದೇವರ ಗೆಳೆಯರನ್ನಾಗಿ,
ಪ್ರವಾದಿಗಳನ್ನಾಗಿ ಮಾಡುವಳು.
28 ಸುಜ್ಞಾನಿಯೊಂದಿಗಿರುವಾತನನ್ನೇ ಹೊರತು
ಇನ್ನಾರನ್ನೂ ಪ್ರೀತಿಸುವುದಿಲ್ಲ ದೇವರು.
29 ಸುಜ್ಞಾನ ಸೂರ್ಯನಿಗಿಂತ ಸುಂದರಳು
ಯಾವ ತಾರಾಮಂಡಲಕ್ಕೂ
ಮಿಗಿಲಾದವಳು

ಬೆಳಕಿಗೆ ಹೋಲಿಸಿದರೆ ಅದನ್ನೂ
ಮೀರುವಳು.
30 ಹಗಲು ಹೋಗಿ ಇರುಳಾಗುವುದು
ಸುಜ್ಞಾನಿಯ ಮುಂದೆ ಕೆಡುಕು ನಿಲ್ಲದು.

## ಸುಜ್ಞಾನದ ಬಯಕೆ

**8** ಸುಜ್ಞಾನವೆಂಬಾಕೆ ಸಂಪೂರ್ಣ
ಶಕ್ತಿಯಿಂದ ಸರಿಯುವಳು
ಜಗದ ಒಂದು ಕಡೆಯಿಂದ ಇನ್ನೊಂದು
ಕಡೆಯವರೆಗು,
ಅನುಕೂಲಕರವಾಗಿಯೆ ನಡೆಸುವಳು
ಎಲ್ಲವನು.
2 ಯೌವನಾರಭ್ಯ ಸುಜ್ಞಾನಿಯನ್ನೆ ಪ್ರೀತಿಸಿ
ಅರಸಿದೆ
ಅವಳನ್ನೇ ಸಹಧರ್ಮಿಣಿಯನ್ನಾಗಿಸಿಕೊಳ್ಳ
ಬಯಸಿದೆ
ಅವಳ ಚೆಲುವಿಗೆ ಮರುಳಾಗಿ
ಮನಸೋತು ಹೋದೆ.
3 ಆಕೆ ವಾಸಮಾಡುತ್ತಾಳೆ ದೇವರ ಸಂಗಡ
ಎಂದೇ ತನ್ನ ಕುಲೀನತೆಯ ಬಗ್ಗೆ ಆಕೆಗೆ
ಹೆಚ್ಚಳ
ಸರ್ವಕ್ಕೂ ಒಡೆಯನಾದ ದೇವರಿಗೆ
ಆಕೆಯ ಮೇಲೆ ಒಲವರ.
4 ಆಕೆ ದೇವಜ್ಞಾನದಲ್ಲಿ
ದೀಕ್ಷೆಹೊಂದಿದವಳು
ಆತನ ಕಾರ್ಯಗಳನ್ನು ಆತನಿಗಾಗಿ
ಆಯ್ಕೆ ಮಾಡುವಳು.
5 ಜೀವನದಲ್ಲಿ ಸಿರಿಸಂಪತ್ತು
ಇಷ್ಟಾರ್ಥವಾದುದಾದರೆ
ಸರ್ವವನು ಮಾಡುವ ಸುಜ್ಞಾನಕ್ಕಿಂತ
ಮಿಗಿಲಾದ ಸಿರಿ ಯಾವುದಿದೆ?
6 ವಿವೇಕವು ಕಾರ್ಯಸಾಧಿಸಬಲ್ಲುದಾದರೆ
ಸರ್ವನಿರ್ಮಾಣಿಕಳಾದ ಈಕೆಯಿಲ್ಲದೆ
ವಿವೇಕವೆಲ್ಲಿದೆ?
7 ಯಾವನಾದರು ನ್ಯಾಯನೀತಿಯನ್ನು
ಪ್ರೀತಿಸುವುದಾದರೆ
ಸದ್ಗುಣಗಳು ಸುಜ್ಞಾನದ ಪರಿಶ್ರಮದ
ಫಲಗಳೇ ಅಲ್ಲವೆ?
ಚಿತ್ತಸ್ವಾಸ್ಥ್ಯ, ವಿವೇಕ, ನೀತಿ, ಧೈರ್ಯ

ಇವುಗಳನ್ನು ಕಲಿಸುತ್ತಾಳೆ
ಬಾಳಿನಲ್ಲಿ ಇವಕ್ಕಿಂತ ಲಾಭಕರವಾದುದು
ಯಾವುದಿದೆ ನರರಿಗೆ?
8 ಮಾನವನು ಹೆಚ್ಚಿನ ಅನುಭವವನ್ನು
ಬಯಸುವುದಾದರೆ
ಸುಜ್ಞಾನ ಹಿಂದಿನ ವಿಷಯಗಳನ್ನು
ಅರಿತವಳಾಗಿದ್ದಾಳೆ
ಮುಂದಿನವುಗಳನ್ನು ಊಹಿಸಿ
ಹೇಳಬಲ್ಲವಳಾಗಿದ್ದಾಳೆ
ಮಾತಿನ ಚಮತ್ಕಾರ ಹಾಗು ಒಗಟಿನ
ಒಳಾರ್ಥವನ್ನೂ ತಿಳಿದಿದ್ದಾಳೆ;
ಪೂರ್ವಸಂಕೇತಗಳ, ಅದ್ಭುತಗಳ, ಕಾಲ
ಋತುಗಳ ಮುನ್ನರಿವು ಅವಳಿಗಿದೆ.
9 ಆದುದರಿಂದ ಆಕೆ ನನಗೆ ಸದಾಲೋಚನೆ
ಕೊಡುವಳು
ಚಿಂತೆವ್ಯಸನಗಳಲ್ಲಿ ಸಂತೈಸುವಳು
ಎಂದು ತಿಳಿದು
ನನ್ನ ಜೊತೆಯಲ್ಲೇ ವಾಸಿಸುವಂತೆ
ಕರೆದುಕೊಳ್ಳಲು ನಿಶ್ಚಯಿಸಿದೆ.
10 ಆಕೆಯ ನಿಮಿತ್ತ ನಾ ಹೊಂದಿದೆ
ಗೌರವವನು ಜನಸಮುದಾಯದಲಿ
ಕಿರಿಯವನಾಗಿದ್ದರೂ ಪಡೆದೆ ಸನ್ಮಾನ
ಹಿರಿಯರ ದೃಷ್ಟಿಯಲಿ.
11 ತೀರ್ಪುಕೊಡುವಾಗ ಚುರುಕು
ಬುದ್ಧಿಯುಳ್ಳವನಾಗಿರುವೆ
ಅಧಿಪತಿಗಳ ಮುಂದೆ ಶ್ಲಾಘನೆ
ಪಡೆದುಕೊಳ್ಳುವೆ.
12 ನಾ ಮೌನದಿಂದಿರುವಾಗ ಅವರು
ನನಗಾಗಿ ಕಾದಿರುವರು
ನಾ ಮಾತಾಡುವಾಗ ನನ್ನ ಕಡೆಗೆ
ಗಮನ ಕೊಡುವರು
ಮಾತು ಮುಂದುವರಿಸಿದಾಗ ಬಾಯಮೇಲೆ
ಕೈಯಿಟ್ಟುಕೊಳ್ಳುವರು!
13 ಆಕೆಯ ನಿಮಿತ್ತವೇ ನನಗೆ
ಪ್ರಾಪ್ತವಾಗುವುದು ಅಮರತ್ವ
ನನ್ನ ಹಿಂದೆ ಬರುವವರಿಗೆ ನಾ ಬಿಟ್ಟು
ಹೋಗುವೆನು ಚಿರಸ್ಮಾರಕ.
14 ನಾನಾಳುವೆನು ಜನಗಳನ್ನು
ನನಗೊಳಗಾಗುವರು ಜನಾಂಗಗಳು.
15 ಭೀಕರ ಅರಸುಗಳೂ ನನಗಂಜುವರು

ನನ್ನ ವಿಷಯ ಕೇಳಿ
ನಾ ಕಾಣಿಸಿಕೊಳ್ಳುವೆ ಒಳ್ಳೆಯವನಾಗಿ,
ಯುದ್ಧಪರಾಕ್ರಮಿಯಾಗಿ.
16 ನಾನು ವಿಶ್ರಮಿಸಿಕೊಳ್ಳುವೆ ಆಕೆಯೊಂದಿಗೆ
ಮನೆ ಸೇರಿ
ಬಿರುಸುತನವಿಲ್ಲ ಅವಳ ಒಡನಾಟದಲ್ಲಿ,
ನೋವಿಲ್ಲ ಸಹವಾಸದಲ್ಲಿ
ಆನಂದವಿದೆ, ಸಂತೋಷವಿದೆ ಅವಳ
ಜೊತೆಯಲ್ಲಿ.
17 ಸುಜ್ಞಾನ ಸಂಬಂಧದಲ್ಲಿ ಅಮರತ್ವ,
ಆಕೆಯ ಸ್ನೇಹದಲ್ಲಿ ಆನಂದ
ಅವಳ ಕೈಕೆಲಸಗಳಿಂದ ಎಂದೂ ಅಳಿಯದ
ಸಿರಿತನ
ಅವಳ ಸಂಭಾಷಣಾ ಶಕ್ತಿಯಿಂದ
ಜ್ಞಾನವಿವೇಕ
ಅವಳ ನುಡಿಬಳಕೆಯಿಂದ ಸುಕೀರ್ತಿ ಗೌರವ.
18 ಇವುಗಳನ್ನೆಲ್ಲಾ ಮನಸ್ಸಿನಲ್ಲಿ
ಆಲೋಚಿಸಿಕೊಂಡು
ತಿರುಗಿದೆ ಆಕೆಯನು ಸಂಪಾದಿಸುವ
ಮಾರ್ಗಹುಡುಕಿಕೊಂಡು.
19 ಮಗುವಾಗಿದ್ದಾಗ ನಾನು ಚೆಲುವಾಗಿದ್ದೆ
ನನ್ನ ಆತ್ಮವೂ ಚೆನ್ನಾಗಿತ್ತು ನನ್ನ ಅದೃಷ್ಟಕ್ಕೆ.
20 ನಾನು ಸದ್ಗುಣಿಯಾಗಿದ್ದುದರಿಂದ
ನನಗೆ ದೊರಕಿತು ನಿಷ್ಕಳಂಕ ದೇಹ.
21 ದೇವರು ಕೊಟ್ಟ ಹೊರತು ಸುಜ್ಞಾನ
ದೊರಕದೆಂದು ಮನಗಂಡೆ
ಅದು ಯಾರ ಕೊಡುಗೆಯೆಂದು ತಿಳಿವುದೇ
ಜ್ಞಾನವಿವೇಕವಲ್ಲವೆ?
ಎಂದೇ ದೇವರನ್ನು ಬೇಡಿಕೊಂಡೆ,
ಮನಸಾರೆ ಹೀಗೆಂದುಕೊಂಡೆ:

### ಸುಜ್ಞಾನಕ್ಕಾಗಿ ಪ್ರಾರ್ಥನೆ

**9** ನಮ್ಮ ಪಿತೃಗಳ ದೇವರೇ, ದಯಾಳು
ಪ್ರಭುವೇ,
ನೀವೆಲ್ಲವನ್ನು ಸೃಷ್ಟಿಸಿರುವಿರಿ
ನಿಮ್ಮ ವಾಕ್ಯದಿಂದಲೇ.
2 ನಿಮ್ಮ ಜ್ಞಾನದಿಂದ ರೂಪಿಸಿದಿರಿ
ಮನುಷ್ಯನನು
ನಿಮ್ಮ ಸೃಷ್ಟಿ ಮೇಲೆಲ್ಲಾ ಅವನಿಗಿತ್ತಿರಿ

ಒಡೆತನವನು.
3 ಅವನನ್ನು ನೇಮಿಸಿದಿರಿ ಜಗವನ್ನಾಳಲು
ನೀತಿಯಿಂದ, ನಿರ್ಮಲಚಿತ್ತದಿಂದ
ನ್ಯಾಯತೀರಿಸಲು ಆತ್ಮಸಾಕ್ಷಿಯಿಂದ,
ನಿಷ್ಠೆಯಿಂದ.
4 ನಿಮ್ಮ ಸಿಂಹಾಸನದ ಬಳಿ ಕುಳಿತಿರುವ
ಸುಜ್ಞಾನವನ್ನು ದಯಪಾಲಿಸಿ
ನಿಮ್ಮ ದಾಸರ ಪಂಕ್ತಿಯಿಂದ ನನ್ನನ್ನು
ತಳ್ಳಿಬಿಡಬೇಡಿ.
5 ನಾನು ನಿಮ್ಮ ಗುಲಾಮನು,
ನಿಮ್ಮ ದಾಸಿಯ ಮಗನು
ಬಲಹೀನನು, ಅಲ್ಪಕಾಲ ಮಾತ್ರ
ಬದುಕುವವನು
ನ್ಯಾಯ ವಿಧಿನಿಯಮಗಳನ್ನು
ಗ್ರಹಿಸಲಶಕ್ತನು.
6 ಮಾನವರೊಳು ಉತ್ತಮೋತ್ತಮನೆನಿಸಿ
ಕೊಂಡವನು
ನಿಮ್ಮಿಂದ ಲಭಿಸುವ ಸುಜ್ಞಾನ
ರಹಿತನಾಗಿರಲು
ಅವನು ಯಾವ ಗಣನೆಗೂ
ಬಾರದವನಾಗಿರುವನು.
7 ನೀವೆನ್ನ ಆಯ್ದುಕೊಂಡಿರಿ ನಿಮ್ಮ ಜನಕ್ಕೆಲ್ಲ
ರಾಜನಾಗಲು
ನಿಮ್ಮ ಪುತ್ರಪುತ್ರಿಯರಿಗೆ
ನ್ಯಾಯಾಧಿಪತಿಯಾಗಿರಲು.
8 ನಿಮ್ಮ ಪವಿತ್ರ ಪರ್ವತದಲ್ಲಿ ನಿಮಗೊಂದು
ದೇವಾಲಯ ನಿರ್ಮಿಸಲು
ನಿಮ್ಮ ನಿವಾಸ ನಗರದಲ್ಲಿ ನಿಮಗೊಂದು
ಬಲಿಪೀಠ ಕಟ್ಟಿಸಲು;
ಅದು ನೀವು ಆದಿಯಲ್ಲಿ ಸಿದ್ಧಮಾಡಿದ
ಗುಡಾರದ ನಕ್ಷೆಯಾಗಿರಬೇಕೆಂತಲು
ನೀವಿತ್ತಿರಿ ನನಗೆ ಆಜ್ಞೆಯನು.
9 ನಿಮ್ಮ ಕಾರ್ಯಗಳನ್ನೆಲ್ಲ ತಿಳಿದ ಸುಜ್ಞಾನ
ಎಂಬಾಕೆ ಇರುವಳು ನಿಮ್ಮಲ್ಲೇ
ನೀವು ಲೋಕವನ್ನು ಸೃಷ್ಟಿಸಿದಾಗ
ಅವಳಿದ್ದಳು ನಿಮ್ಮ ಹತ್ತಿರವೇ.
ನಿಮಗೆ ಪ್ರಿಯವಾದುದನು,
ನಿಮ್ಮ ವಿಧಿಗಳಿಗೆ ಅನುಗುಣವಾದುದನು
ಅರಿತವಳು ಆಕೆ.
10 ಕಳಿಸಿಕೊಡಿ ಆಕೆಯನು ಪರಮ ಪವಿತ್ರ

ಸ್ವರ್ಗನಿವಾಸದಿಂದ
ಬರಮಾಡಿ ಅವಳನ್ನು ನಿಮ್ಮ
ಮಹಿಮಾ ಸಿಂಹಾಸನದಿಂದ
ಅವಳೆನ್ನೊಡನೆ ದುಡಿದು ಕಲಿಸಲಿ ನಿಮಗೆ
ಪ್ರಿಯವಾದುದ.
11 ಆಕೆ ಎಲ್ಲವನ್ನು ಬಲ್ಲವಳು,
ಆಕೆಗಿದೆ ತಿಳುವಳಿಕೆ
ಕಾರ್ಯಸಾಧನೆಯಲ್ಲಿ ನನ್ನ ನಡೆಸುವಳು
ವಿವೇಕಪಥದಲ್ಲೆ
ನನ್ನ ಕಾಯುವಳು ತನ್ನ ಮಹಿಮೆ
ಪ್ರಭಾವದಲ್ಲೆ.
12 ಹೀಗೆ ನನ್ನ ಕೆಲಸಗಳೆಲ್ಲ
ಸಮ್ಮತವಾಗುವುವು ನಿಮಗೆ
ನಾ ನೀತಿಯಿಂದ ನ್ಯಾಯ ತೀರಿಸುವೆನು
ನಿಮ್ಮ ಜನಕ್ಕೆ
ಯೋಗ್ಯನಾಗುವೆನಾಗ ನನ್ನ
ತಂದೆಯ ಸಿಂಹಾಸನಕ್ಕೆ.
13 ದೇವರ ಸಂಕಲ್ಪವನ್ನು
ಅರಿಯಬಲ್ಲವನಾರು?
ಸರ್ವೇಶ್ವರನ ಚಿತ್ತವೇನೆಂದು
ಗ್ರಹಿಸಬಲ್ಲವನಾರು?
14 ಮರ್ತ್ಯ ಮಾನವರ ವಿವೇಚನೆ
ಅಸಮರ್ಪಕವಾದುದೇ
ನಮ್ಮ ಯೋಜನೆಗಳೆಲ್ಲ ಕೈಗೂಡದೆ
ಹೋಗುವಂಥವೇ.
15 ಈ ನಶ್ವರ ದೇಹ ಅಂತರಾತ್ಮವನ್ನು
ಕುಗ್ಗಿಸುತ್ತದೆ
ಈ ಮಣ್ಣಿನ ಗುಡಾರ, ಚಿಂತಾಭರಿತ
ಮನಕ್ಕೊಂದು ಭಾರವೆ.
16 ಧರೆಯ ಮೇಲಿನ ವಿಷಯಗಳನ್ನು
ತಿಳಿಯುವುದೆಷ್ಟೋ ಕಷ್ಟಕರ
ಕೈಗೆಟಕುವುಗಳನ್ನೇ ಕಂಡರಿತುಕೊಳ್ಳುವುದು
ಎಷ್ಟೋ ಪ್ರಯಾಸಕರ.
ಇಂತಿರಲು, ಸ್ವರ್ಗದಲ್ಲಿರುವುದನು
ಬಯಲಿಗೆ ತರಲು ಯಾರು ಸಮರ್ಥ?
17 ನೀವು ನಿಮ್ಮ ಸುಜ್ಞಾನವನ್ನು
ಅನುಗ್ರಹಿಸದೆ ಹೋಗಿದ್ದರೆ
ನಿಮ್ಮ ಪವಿತ್ರಾತ್ಮನನ್ನು ಸ್ವರ್ಗದಿಂದ
ಕಳುಹಿಸದೆ ಹೋಗಿದ್ದರೆ
ನಿಮ್ಮ ಸಂಕಲ್ಪವನ್ನು ಯಾರಾದರು

ಅರಿಯುತ್ತಿದ್ದರೆ?
18 ಹೀಗೆ ಲೋಕದ ಮಾರ್ಗಗಳನ್ನು
ತಿದ್ದಲಾಯಿತು,
ನಿಮಗೆ ಮೆಚ್ಚುಗೆಯಾದುದನು
ಜನರಿಗೆ ಕಲಿಸಲಾಯಿತು,
ಸುಜ್ಞಾನದಿಂದಲೇ ಅವರಿಗೆ ರಕ್ಷಣೆ
ಲಭಿಸುವಂತಾಯಿತು.

**ಇತಿಹಾಸದಲ್ಲಿ ಸುಜ್ಞಾನದ ಪಾತ್ರ**
**ಆದಾಮನಿಂದ ಮೋಶೆಯವರೆಗೆ:**

**ಆದಾಮ**

**10** ಕಾಪಾಡಿದಳು ಸುಜ್ಞಾನ
ಒಂಟಿಯಾಗಿ ಸೃಷ್ಟಿಯಾದ
ಜಗದಾದಿ ಪಿತನನು
ಅವನ ತಪ್ಪಿನಿಂದ ಅವನನು
ಉದ್ಧಾರಮಾಡಿದಳು.
2 ಎಲ್ಲವುಗಳ ಮೇಲೆ ದೊರೆತನ ನಡೆಸಲು
ಅವನಿಗೆ ಶಕ್ತಿ ನೀಡಿದಳು.

**ಕಾಯಿನ**

3 ಅಧರ್ಮಿಯೊಬ್ಬನು ಸಿಟ್ಟಿನಿಂದ ಆಕೆಯನು
ಬಿಟ್ಟುಹೋದಾಗ
ತನ್ನ ತಮ್ಮನನ್ನೆ ಕೊಂದಾ ಪಾಪದಲ್ಲಿ
ತಾನೇ ಹಾಳಾಗಿ ಹೋದ.

**ನೋವ**

4 ಅವನ ಪ್ರಯುಕ್ತ ಜಲಪ್ರಳಯದೊಳು
ಜಗವು ಮುಳುಗಿಹೋಗುತ್ತಿರಲು
ಉಳಿಸಿದಳು ಜ್ಞಾನಪ್ರಭೆಯಾದವಳು
ಮರತುಂಡಿನಾ ನಾವಿಗೆಯನು ಸೂಚಿಸಿ
ನೀತಿವಂತನಾದವನಿಗೆ ಗತಿಯನು ತೋರಿಸಿ.

**ಅಬ್ರಹಾಮ**

5 ದುಷ್ಟತನದಲಿ ರಾಷ್ಟ್ರಗಳು ಒಂದಾಗಿ
ಗಲಿಬಿಲಿಗೊಂಡಿದ್ದಾಗ
ಸಜ್ಜನನೊಬ್ಬನಾಯ್ದು,
ದೋಷರಹಿತನನ್ನಾಗಿಸಿತು ಆ ಸುಜ್ಞಾನ
ಈ ಕಾರಣ ಪುತ್ರವಾತ್ಸಲ್ಯ ಮೀರಿ
ದೇವಾಜ್ಞೆಗೆ ತಲೆಬಾಗಿದನಾತ.

**ಲೋಟ**

6 ದುರುಳ ಜನರು ಅಳಿದುಹೋಗುತ್ತಿದ್ದಾಗ
ಸಜ್ಜನನೊಬ್ಬನನ್ನು ಉಳಿಸಿತು ಸುಜ್ಞಾನ.
ಈ ಕಾರಣ, ಪಂಚಪಟ್ಟಣಗಳು
ಆಕಾಶದಗ್ನಿಯಿಂದ ಉರಿವಾಗ
ಅವನೊಬ್ಬನೇ ಅಲ್ಲಿಂದ ತಪ್ಪಿಸಿಕೊಂಡು
ಓಡಿಹೋದ.
7 ಆ ಊರುಗಳ ದುಷ್ಟತನವನು ತೋರಿಸಲು
ಹೊಗೆಯಾಡುವ ಹಾಳುಭೂಮಿ
ಸಾಕ್ಷಿಯಾಗಿ ನಿಂತಿದೆ ಇಂದಿಗೂ.
ಅಲ್ಲಿಯ ಸಸಿಗಳು ಫಲಬಿಟ್ಟರೂ
ಅವುಗಳ ಕಾಯಿ ಮಾಗವು;
ನಂಬದೆ ಹೋದ ಜೀವಾತ್ಮಕೆ ಸ್ಮಾರಕವಾಗಿ
ನಿಂತಿದೆ ಉಪ್ಪಿನ ಕಂಬವು.
8 ಸುಜ್ಞಾನದ ಹಾದಿಯನ್ನು ಅವರು
ಉಲ್ಲಂಘಿಸಿದರು.
ಈ ಕಾರಣ ಅವರಿಂದಾಗಲಿಲ್ಲ
ಒಳಿತನು ಗುರುತಿಸಲು;
ಮಾತ್ರವಲ್ಲ, ತಮ್ಮ ಮೂರ್ಖತನದ
ಗುರುತನು ಬಿಟ್ಟುಹೋದರು;
ಆ ಪತನದ ಘಟನೆಯನ್ನು ಮರೆಮಾಚಲು
ಅವರಿಂದಾಗದು.
9 ಸುಜ್ಞಾನವೆಂಬಾಕೆ ಸಂರಕ್ಷಿಸಿದಳು
ಕಷ್ಟದುಃಖಗಳಿಂದ ತನ್ನ ಶರಣರನು.

**ಯಕೋಬ**

10 ಅಣ್ಣನ ಕೋಪಕ್ಕೆ ಅಂಜಿ ಓಡುತ್ತಿದ್ದಾ
ಸಜ್ಜನನನ್ನು
ಸುಜ್ಞಾನಿ ನೆಟ್ಟನೆಯ ದಾರಿಯಲ್ಲಿ
ನಡೆಸಿದಳು.
ದೇವರ ರಾಜ್ಯವನು ಅವನಿಗೆ
ತೋರಿಸಿಕೊಟ್ಟಳು.
ಪರಮಾರ್ಥ ಜ್ಞಾನನೀಡಿ,
ಪರಿಶ್ರಮೆಯನ್ನು ಸಫಲಗೊಳಿಸಿದಳು
ಅವನ ದುಡಿಮೆಯ ಫಲ ಹೆಚ್ಚಾಗುವಂತೆ
ಮಾಡಿದಳು.
11 ಸ್ವಾರ್ಥಿಗಳ ಹಿಡಿತದಲ್ಲಿ ಅವನು
ಸಿಕ್ಕಿಬಿದ್ದಿರಲು
ಸುಜ್ಞಾನಿ ಅವನಿಗೆ ಬೆಂಬಲವಿತ್ತು

ಸಿರಿವಂತನನ್ನಾಗಿಸಿದಳು.
12 ವೈರಿಗಳಿಂದ ತಪ್ಪಿಸಿ, ಬಲೆಯೊಡ್ಡಿದವರಿಂದ
ರಕ್ಷಿಸಿದಳು;
ದೇವಭಕ್ತಿಯೇ ಎಲ್ಲಕು
ಪ್ರಬಲವಾದುದೆಂದು ಕಲಿಸಲು
ಉಗ್ರ ಹೋರಾಟದಲಿ ಅವನನು
ಜಯಶಾಲಿಯನ್ನಾಗಿಸಿದಳು.

### ಜೋಸೆಫ್

13 ಸತ್ಪುರುಷನೊಬ್ಬನು ವಿಕ್ರಯಿಸಲ್ಪಟ್ಟಾಗ
ಸುಜ್ಞಾನಿ ಅವನನು ಕೈಬಿಡದೆ
ಕಾಪಾಡಿದಳು ಪಾಪದಿಂದ.
14 ಬಂಧನದಲ್ಲಿದ್ದಾಗಲು ಬಿಡದೆ
ಅವನೊಂದಿಗೆ ಸೆರೆಗೆ ಹೋದಳು.
ರಾಜದಂಡ ಸಿಕ್ಕಿ, ಅಧಿಕಾರಿಗಳ ಮೇಲೆ
ಅಧಿಕಾರ ನಡೆಸುವ ತನಕ
ನೆರವಾದಳು.
ಅವನ ಮೇಲೆ ತಪ್ಪು ಹೊರಿಸಿದವರೇ
ಸುಳ್ಳುಗಾರರೆಂದು ತೋರ್ಪಡಿಸಿದಳು
ಆತನಿಗೆ ಚಿರವಾದ ಕೀರ್ತಿಯನ್ನು
ತಂದುಕೊಟ್ಟಳು.

### ವಿಮೋಚನೆ

15 ಪವಿತ್ರ ಹಾಗು ನಿಷ್ಕಳಂಕ ಪ್ರಜೆಯನು
ಪೀಡಿಸುತ್ತಿದ್ದ ಜನಾಂಗದಿಂದ
ವಿಮೋಚಿಸಿದಳು.
16 ಸರ್ವೇಶ್ವರನ ದಾಸನೊಬ್ಬನ
ಅಂತರಾಳವನ್ನು ಹೊಕ್ಕು
ಅದ್ಭುತ ಮಹತ್ಕಾರ್ಯಗಳಿಂದ ಭಯಾನಕ
ರಾಜನನ್ನೆದುರಿಸಿದಳು.
17 ದೇವಜನರು ಪಟ್ಟ ಪ್ರಯಾಸಕೆ
ತಕ್ಕ ಪ್ರತಿಫಲವನ್ನಿತ್ತಳು
ಅಗಾಧ ಮಾರ್ಗದಲ್ಲಿ ಅವರನು
ಸಾಗಿಸಿಕೊಂಡು ಹೋದಳು
ಅವರಿಗೆ ಬಿಸಿಲಲ್ಲಿ ನೆರಳಂತೆ,
ಇರುಳಲ್ಲಿ ತಾರಾದೀಪದಂತೆ ಇದ್ದಳು.
18 ಅವರನ್ನು ಕೆಂಪುಸಮುದ್ರ ದಾಟಿಸಿ ತಂದಳು
ಜಲರಾಶಿಯಿಂದ ಸಾಗಿಸಿಕೊಂಡು
ಹೋದಳು.
19 ಅವರ ವೈರಿಗಳನು ನೀರಿನಲ್ಲಿ

ಮುಳುಗಿಸಿದಳು
ಉಕ್ಕುವ ಸಾಗರದಡಿಯಿಂದ ಅವರನು
ಕಕ್ಕಿಬಿಟ್ಟಳು.
20 ಸರ್ವೇಶ್ವರಾ, ಹೀಗೆ ಸಜ್ಜನರು
ಸದೆಬಡಿದರು ದುರ್ಜನರನು
ಸಂಕೀರ್ತಿಸಿದರು ನಿಮ್ಮ ಪರಮ ಪವಿತ್ರ
ನಾಮವನು
ಒಕ್ಕೊರಲಿನಿಂದ ಹೊಗಳಿದರು, ಅವರಪರ
ಹೋರಾಡಿದ ನಿಮ್ಮ ಭುಜಬಲವನು.
21 ಮೂಕರ ಬಾಯನು ತೆರೆದವಳು
ಆ ಸುಜ್ಞಾನಿಯೇ
ಹಸುಳೆಯರ ನಾಲಿಗೆಯನು
ಚುರುಕುಗೊಳಿಸಿದವಳು ಆಕೆಯೇ.

**ಮೋಶೆ**

**11** ಪವಿತ್ರ ಪ್ರವಾದಿಯೊಬ್ಬನ
ಮುಖಾಂತರ
ಸಫಲಗೊಳಿಸಿದಳು ಅವರ
ಕಾರ್ಯಗಳನ್ನೆಲ್ಲಾ.
2 ನಿರ್ಜನ ಮರುಭೂಮಿಯಲ್ಲವರು
ಪ್ರಯಾಣ ಮಾಡಿದರು
ಹಾದಿಗಳೇ ಇಲ್ಲದ ಪ್ರದೇಶಗಳಲಿ
ಗುಡಾರ ಹಾಕಿದರು.
3 ಶತ್ರುಗಳನ್ನು ಎದುರಿಸಿದರು
ವೈರಿಗಳನು ಹಿಂದಕ್ಕಟ್ಟಿದರು.
4 ಬಾಯಾರಿದಾಗ ನಿಮ್ಮನ್ನು
ಬೇಡಿಕೊಂಡರು
ಸೀಳಿದ ಬಂಡೆಯಿಂದ ಅವರಿಗೆ ನೀರು
ಸಿಕ್ಕಿತು
ಗಡಸು ಕಲ್ಲಿಂದ ನೀರು ಬಂದು
ದಣಿವಾರಿಸಿತು.
5 ಯಾವುದರಿಂದ ಶತ್ರುಗಳಿಗೆ ದಂಡನೆ
ಆಯಿತೋ
ಅದರಿಂದಲೇ ಇಸ್ರಯೇಲರ ಕಷ್ಟ
ಪರಿಹಾರವಾಯಿತು.
6 ನಿತ್ಯವೂ ಹರಿಯುವ ನದಿ ನೀರು
ನೆತ್ತರಾಗಿ ಹೆಪ್ಪುಗಟ್ಟಲು ಕಂಗಾಲಾದರು
ವೈರಿಗಳು.
7 ಹಸುಮಕ್ಕಳನು ಸಂಹರಿಸಬೇಕೆಂಬ

ರಾಜಾಜ್ಞೆಯನ್ನು ಹೀಗೆ ಧಿಕ್ಕರಿಸಿದಿರಿ
ನಿಮ್ಮವರಿಗೋ ನಿರೀಕ್ಷೆ ಮೀರಿದ ವಿಫುಲ
ನೀರನ್ನು ಹೀಗೆ ಒದಗಿಸಿದಿರಿ.
8 ನಿಮ್ಮವರು ದಾಹತಾಪವನು
ಅನುಭವಿಸುವಂತೆ ಮಾಡಿದಿರಿ
ಈ ಪರಿ ಅವರ ವಿರೋಧಿಗಳನ್ನು
ದಂಡಿಸಿದ ರೀತಿಯನು ತೋರಿದಿರಿ.
9 ನಿಮ್ಮವರು ಪರೀಕ್ಷೆಗೆ ಗುರಿಯಾದರು;
ಇದು ನಿಮ್ಮ ಕರುಣಾನುಸಾರ
ಸುಶಿಕ್ಷಣವಾಗಿತ್ತು.
ದುರುಳರು ನಿಮ್ಮ ಕುಪಿತ
ನ್ಯಾಯತೀರ್ಪಿಗೆ ಗುರಿಯಾದರು
ಈ ಮೂಲಕ ದುಷ್ಟರ ಶಿಕ್ಷೆಯ
ತೀವ್ರತೆಯನು ಕಲಿತುಕೊಂಡರು.
10 ಇವರನ್ನು ಒರೆಗೆ ಹಚ್ಚಿದಿರಿ
ತಂದೆ ಮಕ್ಕಳನು ಗದರಿಸುವಂತೆ
ಅವರನ್ನಾದರೋ ಪರಿಶೋಧಿಸಿದಿರಿ
ಕಠೋರನಾದ ರಾಜನಂತೆ.
11 ಅವರು ದೇವಜನರಿಗೆ ಹತ್ತಿರವಿದ್ದರೂ
ದೂರವಿದ್ದರೂ
ಒಂದೇ ಸಮನೆ ಸಂಕಟವನು
ಅನುಭವಿಸುತ್ತಿದ್ದರು.
12 ಇಂದಿನ ಸ್ಥಿತಿಯನು, ಹಿಂದಿನ
ಸ್ಥಿತಿಯನು ನೆನೆದು
ಅವರು ಪಡುತ್ತಿದ್ದ ಪಾಡು
ಇಮ್ಮಡಿಯಾಗಿತ್ತು.
13 ತಮಗಾದ ಶಿಕ್ಷೆಯಿಂದ ಇಸ್ರಯೇಲರಿಗೆ
ಲಾಭವಾಯಿತೆಂದು ಕೇಳಲು
ಸರ್ವೇಶ್ವರನಿಂದಲೇ ಇದಾಯಿತೆಂದು
ಅವರಿಗೆ ಮನದಟ್ಟಾಯಿತು.
14 ಹಿಂದೊಮ್ಮೆ ಅವನನ್ನು ಕೂಸಾಗಿ ಬಿಸಾಡಿ
ಬಿಟ್ಟಿದ್ದರು; ಪರಿಹಾಸ್ಯ ಮಾಡಿದ್ದರು.
ಈಗ ಸಜ್ಜನರಿಗಿಂತಲು ಬೇರೆ ವಿಧದಲಿ
ಬಾಯಾರಿದವರಾಗಿ, ನಿಬ್ಬೆರಗಾದರು.
15 ಅವರು ದುಷ್ಟ ಹಾಗು ವ್ಯರ್ಥ
ಆಲೋಚನೆಗಳಿಂದ ದಾರಿತಪ್ಪಿದರು
ಬುದ್ಧಿಹೀನ ಸರ್ಪವನು ಹಾಗು ವಿಕಾರ
ಪ್ರಾಣಿಗಳನು ಪೂಜಿಸಿದರು
ಆ ಪ್ರಾಣಿಗಳ ಗುಂಪನೇ ಅವರ ಮೇಲೆ
ಕಳಿಸಿದಿರಿ ಮುಯ್ಯಿ ತೀರಿಸಲು.

16 ಹೀಗೆ ಮಾನವ ಯಾವುದರಿಂದ
ಪಾಪಮಾಡುತ್ತಾನೋ
ಅದರಿಂದಲೇ ದಂಡಿಸಲ್ಪಡುತ್ತಾನೆ
ಎಂಬುದನು
ಕಲಿತುಕೊಳ್ಳಲು ಒದಗಿಸಿದಿರಿ
ಸದವಕಾಶವನು.
17 ಸರ್ವೇಶ್ವರಾ, ಸರ್ವಶಕ್ತಿಯಿಂದ ಕೂಡಿದ
ನಿಮ್ಮ ಹಸ್ತವು
ಆಕಾರರಹಿತ ಪ್ರಕೃತಿಯಿಂದ ಜಗತ್ತನ್ನು
ನಿರ್ಮಿಸಿತು
ಆ ಜನರನು ದಂಡಿಸಲು ನಿಮಗೇನು
ಕೊರತೆಯಿತ್ತು?
ಕರಡಿಗಳ, ಭೀಕರ ಸಿಂಹಗಳ ಗುಂಪನು
ಕಳುಹಿಸಬಹುದಿತ್ತು.
18 ಅಗ್ನಿಶ್ವಾಸ ಬಿಡುವಂಥ, ಮೂಗಲಿ ಹೊಗೆ
ಭುಗಿಲೇಳಿಸುವಂಥ,
ಕಣ್ಣುಗಳಿಂದ ಭೀಕರ ಕಿಡಿಕಾರುವಂಥ,
ಹೊಸದಾಗಿ ನಿರ್ಮಾಣವಾದಂಥ,
ಯಾರಿಗೂ ಗುರುತೇ ಇಲ್ಲದಂಥ
ಮೃಗಗಳು ನೀವು
ಕಳುಹಿಸಬಹುದಿತ್ತಲ್ಲಾ !
19 ಅವು ಹಾನಿಮಾಡಿ ಆ ಜನರನ್ನು
ಧ್ವಂಸಮಾಡಬಹುದಾಗಿತ್ತು;
ಅವುಗಳ ನೋಟದಿಂದಲೆ ದಿಗಿಲುಗೊಂಡು
ಅವರು ಸಾಯಬಹುದಿತ್ತು.
20 ಇಲ್ಲವೆ, ನಿಮ್ಮ ನೀತಿ ಅವರನ್ನು ಬೆನ್ನಟ್ಟಿ
ಹೋಗಬಹುದಿತ್ತು.
ನಿಮ್ಮ ಶಕ್ತಿಯ ಶ್ವಾಸದಿಂದ ಅತ್ತಿತ್ತ
ಚದರಿಸಬಹುದಿತ್ತು.
ನಿಮ್ಮ ಒಂದೇ ಉಸಿರಿನಿಂದ ಅವರು
ಬಿದ್ದು ಹೋಗಬಹುದಿತ್ತು !
ಆದರೆ ಇದೆಲ್ಲವು ನಿಮ್ಮ ಅಳತೆ, ಅಂಕೆ,
ತೂಕದಂತೆ ನೆರವೇರಿತು.

**ದೇವರು ದಯಾಪರ**

21 ನಿಮ್ಮ ಸಾಮರ್ಥ್ಯವನು ಎಂದಾದರು
ತೋರಿಸಬಲ್ಲವರು ನೀವು
ನಿಮ್ಮ ಬಾಹುಬಲವನ್ನು
ಎದುರಿಸಬಲ್ಲವನು ಯಾವನು?
22 ನಿಮ್ಮ ದೃಷ್ಟಿಯಲಿ ಇಡೀ ವಿಶ್ವವು

ತಕ್ಕಡಿಯಲ್ಲಿನ ಒಂದು ಅಣುವಿನಂತೆ
ಮುಂಜಾನೆ ನೆಲಕ್ಕೆ ಬೀಳುವ ಮಂಜಿನ
ಒಂದು ಹನಿಯಂತೆ.
23 ಏನು ಮಾಡಲೂ ನಿಮಗೆ ಶಕ್ತಿಯಿದೆ,
ಆದರೂ ಎಲ್ಲರಿಗೂ ಕರುಣೆ
ತೋರುತ್ತೀರಿ.
ಜನರು ನಿಮಗೆ ಅಭಿಮುಖರಾಗಲೆಂದೆ,
ಅವರ ಪಾಪಗಳನು ಕಂಡರೂ
ಕಾಣದಂತಿದ್ದೀರಿ.
24 ಪ್ರೀತಿಸುತ್ತೀರಿ ಸೃಷ್ಟಿಯನೆಲ್ಲಾ
ನೀವುಂಟು ಮಾಡಿದ್ದನು ಹೇಸುವುದಿಲ್ಲ
ಹೇಸುತ್ತಿದ್ದರೆ ಉಂಟುಮಾಡುತ್ತಿರಲಿಲ್ಲ.
25 ನಿಮ್ಮ ಚಿತ್ತ ಇದ್ದಹೊರತು,
ಯಾವುದು ಬಾಳೀತು?
ನಿಮ್ಮ ಕರೆ ಇಲ್ಲದಿದ್ದರೆ,
ಉದ್ದುದು ಹೇಗೆ ಉಳಿದೀತು?
26 ಹೇ ಸರ್ವೇಶ್ವರಾ, ಜೀವಾತ್ಮಗಳ
ಪ್ರಿಯನೇ,
ಎಲ್ಲವೂ ನಿಮ್ಮವಾದುದರಿಂದ,
ಎಲ್ಲಕ್ಕೂ ಇದೆ ನಿಮ್ಮ ರಕ್ಷಣೆ

**12** ಅಮರವಾದ ನಿಮ್ಮ ಚೈತನ್ಯವು
ಇರುವುದು ಪ್ರತಿಯೊಂದರಲ್ಲೂ.
2 ಎಂದೇ ಸನ್ಮಾರ್ಗದಿಂದ ತಪ್ಪಿಹೋದವರನು
ಸ್ವಲ್ಪಸ್ವಲ್ಪವಾಗಿ ತಿದ್ದುತ್ತೀರಿ
ಮಾಡಿದ ಅಪರಾಧಗಳನು ನೆನಪಿಗೆ
ತಂದುಕೊಟ್ಟು ಎಚ್ಚರಿಸುತ್ತೀರಿ.
ಸರ್ವೇಶ್ವರಾ, ದುಷ್ಟತನ ಬಿಟ್ಟು
ನಿಮ್ಮನ್ನವರು ನಂಬಲೆಂದೇ ಹೀಗೆ
ಮಾಡುತ್ತೀರಿ.

### ಆದಿ ಕಾನಾನ್ಯರ ಅಕ್ರಮ

3 ಹೇ ಸರ್ವೇಶ್ವರಾ, ನೀವು ಬೇಸರಗೊಂಡಿರಿ
ನಿಮ್ಮ ಪೂಜ್ಯನಾಡಿನ ಪೂರ್ವನಿವಾಸಿಗಳ
ವಿಷಯದಲಿ.
4–5 ಮಾಯಮಾಟ; ಅಶುದ್ಧ ಆಚಾರ
ನಿರ್ದಯವಾದ ಶಿಶುಹತ್ಯೆ, ನರಬಲಿ,
ರಕ್ತಮಾಂಸ ಭೋಜನ
ಇಂಥ ಹೇಯ ಕೃತ್ಯಗಳನ್ನೆಲ್ಲ ಅವರು

ನಡೆಸಿದರಲ್ಲಾ !
6 ಅಸಹ್ಯವಾದ ಅನ್ಯಮತಕೆ ದೀಕ್ಷೆ
ಹೊಂದಿದವರ ಹಾಗೆ
ಬಲಿಕೊಡುತ್ತಿದ್ದರವರು ತಮ್ಮ ಸ್ವಂತ
ಮಕ್ಕಳನೆ.
7 ಇವರು ನಿರ್ಮೂಲರಾದರು ನಮ್ಮ
ಪೂರ್ವಜರ ಕೈಯಿಂದ
ನಿರ್ಮೊಲವಿನಾ ನಾಡು, ದೇವಜನರ
ನಿವಾಸವಾಗಬೇಕೆಂದೆ ನಿಮ್ಮ ಸಂಕಲ್ಪ.
8 ಆದರೂ, ಮನುಷ್ಯರಾದ ಅವರು ಕ್ರಮೇಣ
ನಾಶವಾಗಲೆಂದು
ನಿಮ್ಮ ಸೈನ್ಯದ ಮುಂದಾಗಿ ಕಳುಹಿಸಿದಿರಿ
ಕಣಜದ ಹುಳುಗಳನು.
9 ದುರ್ಜನರನು ಸಜ್ಜನರ ಕೈಯಿಂದ
ಯುದ್ಧದಲಿ ನೀವು ಸದೆಬಡಿಯಬಹುದಿತ್ತು
ಉಗ್ರಮೃಗಗಳಿಂದ, ಒಂದೇ ಬಿರುನುಡಿ
ಯಿಂದ ಸಾಯಿಸಬಹುದಿತ್ತು.
10 ಆದರೆ ಕ್ರಮೇಣ ದಂಡನೆಯಿಂದ
ಪಶ್ಚಾತ್ತಾಪಪಡಲು ಸದವಕಾಶ
ನೀಡಿದಿರಿ.
ಹುಟ್ಟಿನಿಂದ ಕೆಟ್ಟವರು, ದುಷ್ಟಗುಣ
ಉಳ್ಳವರು, ಬಗ್ಗದ ಹಠಮಾರಿಗಳೆಂದು
ಅರಿತಿದ್ದೀರಿ.
11 ಅವರ ಸಂತಾನ ಆದಿಯಿಂದ ಶಾಪಗ್ರಸ್ತ
ಅವರಿಗೆ ಕ್ಷಮೆ ನೀಡುತ್ತಾ ಬಂದುದು
ಭಯದಿಂದೇನೂ ಅಲ್ಲ.

### ದೇವರ ಸಹನೆಗೆ ಕಾರಣ

12 ಏನು ಮಾಡಿರುವೆ? ಎಂದು ನಿಮ್ಮನ್ನು
ಯಾವನು ಕೇಳಿಯಾನು?
ನಿಮ್ಮ ತೀರ್ಪನು ಕುರಿತು ಯಾರು ತಾನೆ
ಪ್ರತಿಭಟಿಸಿಯಾನು?
ನೀನೆ ಸೃಷ್ಟಿಸಿದ ಜನಾಂಗವನ್ನೇಕೆ ನಾಶ
ಮಾಡಿದೆ ಎಂದು ದೂರುವವನಾರು?
ದುಷ್ಟರ ಪರವಾಗಿ ನಿಂತು ಮುಯ್ಯಿ
ತೀರಿಸಲು ನಿಮ್ಮ ಮುಂದೆ
ನಿಲ್ಲಬಲ್ಲವನಾರು?
13 ಸರ್ವಜನರ ಸುಖ ಕೋರುವ ದೇವರು
ನೀವಲ್ಲದೆ ಇನ್ನಾರೂ ಇಲ್ಲ.
ನೀವು ವಿಧಿಸಿದ ದಂಡನೆ ಅನ್ಯಾಯವಲ್ಲ

ಎಂದು ನೀವು ತೋರಿಸಬೇಕಾಗಿಲ್ಲ.
14 ನೀವು ಶಿಕ್ಷಿಸಿದವರ ಪಕ್ಷವಹಿಸಿ
ನಿಲ್ಲತಕ್ಕವನಿಲ್ಲ
ಅರಸನಾಗಲಿ, ದೊರೆಯಾಗಲಿ, ಯಾರೂ ಇಲ್ಲ.
15 ನ್ಯಾಯಸ್ವರೂಪಿಯಾದ ನೀವು ಸರ್ವ
ವನೂ ನ್ಯಾಯವಾಗಿಯೆ ಆಳುತ್ತೀರಿ.
ನಿರಪರಾಧಿಯನು ಅಪರಾಧಿಯೆಂದು
ದಂಡಿಸುವುದು ಅಯೋಗ್ಯ
ಎಂದರಿತಿದ್ದೀರಿ.
16 ನಿಮ್ಮ ಶಕ್ತಿಯೇ ನ್ಯಾಯನೀತಿಗೆ ಆಧಾರ
ನಿಮ್ಮ ಸಾರ್ವಭೌಮತ್ವವೇ
ಎಲ್ಲ ಸಹನೆಗೆ ಮೂಲ ಕಾರಣ.
17 ನೀವು ಸರ್ವಶಕ್ತರೆಂದು ಜನರು
ನಂಬದಿರುವಾಗ
ನೀವು ಶಕ್ತಿಯನ್ನು ತೋರಿಸುತ್ತೀರಿ;
ಅದನು ಬಲ್ಲವರೊಂದಿಗೆ ವರ್ತಿಸುವಾಗ
ಅವರ ಉದ್ಧಟತನವನ್ನು ಖಂಡಿಸುತ್ತೀರಿ.
18 ಶಕ್ತಿಯಲ್ಲಿ ನೀವೇ ಸಾರ್ವಭೌಮ
ಎಂದೇ, ತೀರ್ಪಿಡುತ್ತೀರಿ ಸಾಮ್ಯತೆಯಿಂದ
ನಮ್ಮನ್ನಾಳುತ್ತೀರಿ ಬಹು ತಾಳ್ಮೆಯಿಂದ
ನಿಮ್ಮ ಶಕ್ತಿ ನಿಮ್ಮಲ್ಲಿದೆ ಇಚ್ಛಿಸಿದಾಗಲೆಲ್ಲ
19 ಇಂಥ ಕಾರ್ಯಗಳಿಂದ ಸಜ್ಜನನು ಜನಪ್ರಿಯ
ನಾಗಿರಲು ಕಲಿಸಿಕೊಟ್ಟಿರುವಿರಿ
ಪಾಪಗಳಿಗೆ ಪಶ್ಚಾತ್ತಾಪದ ಅವಕಾಶವಿತ್ತು
ನಿಮ್ಮ ಮಕ್ಕಳನು
ಭರವಸೆಯುಳ್ಳವರಾಗಿಸಿದಿರಿ.
20 ನಿಮ್ಮ ಮಕ್ಕಳ ಶತ್ರುಗಳನ್ನು ಶಿಕ್ಷಿಸಿದಿರಿ
ಸಾವಧಾನದಿಂದ, ತಾಳ್ಮೆಯಿಂದ.
ಮರಣದಂಡನೆಗೆ ಅರ್ಹರಾಗಿದ್ದರೂ
ಪಶ್ಚಾತ್ತಾಪಕೆ ಅವರಿಗಿತ್ತಿರಿ
ಕಾಲಾವಕಾಶ.
21 ಇಂತಿರಲು ನಿಮ್ಮ ಮಕ್ಕಳ ನ್ಯಾಯವನು
ನಿರ್ಣಯಿಸಿದಿರಿ ಎಷ್ಟೋ
ಜಾಗ್ರತೆಯಿಂದ
ಅವರ ಪಿತೃಗಳೊಂದಿಗೆ ಮಾಡಿದಿರಿ
ದೃಢ ಒಪ್ಪಂದ,
ಇತ್ತಿರಲ್ಲವೆ ಸೌಭಾಗ್ಯದ ವಾಗ್ದಾನ?
22 ಹೌದು, ಶಿಕ್ಷಿಸುತ್ತೀರಿ ನೀವು ನಮ್ಮನು,
ಆದರೆ ಸಾವಿರ ಪಾಲು ಹೆಚ್ಚಾಗಿ
ದಂಡಿಸುತ್ತೀರಿ ವೈರಿಗಳನು.

ನಾವು ತೀರ್ಪಿಡುವಾಗ ಮನದಲ್ಲಿಡಬೇಕು
ನಿಮ್ಮ ಒಳ್ಳೆಯತನವನು
ನಾವೇ ತೀರ್ಪಿಗೊಳಗಾದಾಗ
ನಿರೀಕ್ಷಿಸಬೇಕು ನಿಮ್ಮ ಕರುಣೆಯನು.

### ಕ್ರಮೇಣ ಈಜಿಪ್ಟರಿಗಾದ ದಂಡನೆ

23 ಮಂದಮತಿಯಿಂದ ದುರುಳರು ನಡೆಸಿದರು
ದುಂದು ಜೀವನವನೆ
ಬಾಧಿಸಿದಿರಿ ನೀವು ಅವರನು ಅವರ
ಹೇಯಕೃತ್ಯಗಳಿಂದಲೆ.
24 ತಪ್ಪುದಾರಿಯಲ್ಲಿ ಅವರು ನಡೆದರು
ಬಹುದೂರ
ದೇವರನ್ನಾಗಿಸಿಕೊಂಡರು, ವೈರಿಗಳಿಗೂ
ಹೇಯವಾದ ಪ್ರಾಣಿಗಳನು,
ಮೋಸಹೋದರು ಬುದ್ಧಿಯಿಲ್ಲದ
ಚಿಕ್ಕಮಕ್ಕಳ ಪರಿಯೊಳು.
25 ಆದುದರಿಂದ ಆ ತಿಳಿಗೇಡಿ ಮಕ್ಕಳಿಗೆ
ಕೊಟ್ಟಿರಿ ನೀವು ಹುಸಿಪೆಟ್ಟನು.
26 ಮಕ್ಕಳಿಗೆ ಕೊಡುವ ಆ ತಿದ್ದುಪಾಟಿನಿಂದ
ಬುದ್ಧಿಕಲಿಯದವರು
ದೇವರಿಂದ ಬರುವ ಕಠಿಣ ದಂಡನೆಗೆ
ಗುರಿಯಾಗುವರು.
27 ದೇವರುಗಳೆಂದುಕೊಂಡ ಪ್ರಾಣಿಗಳ
ಮೂಲಕ ಕಷ್ಟಕ್ಕೀಡಾಗಿ
ಕುಪಿತಗೊಂಡರು
ಈವರೆಗೆ ದೇವರೆಂದು ನಿರಾಕರಿಸಿದ
ತಮ್ಮನೆ ಸತ್ಯದೇವನೆಂದು
ಗುರುತಿಸಿದರು.
ಈ ಕಾರಣವೇ ಎರಗಿತು ಅವರ ಮೇಲೆ
ಕಟ್ಟಕಡೆಯ ಘೋರ ದಂಡನೆ.

### ಪ್ರಕೃತಿ ಪೂಜೆ

**13** ದೇವರನ್ನು ಅರಿಯದ
ಮನುಜರೆಲ್ಲರು
ಮಂದಮತಿಗಳೆಂಬುದು ಸಹಜ.
ಕಣ್ಣಿಗೆ ಕಾಣುವ ಚೆಲುವಾದವುಗಳಿಂದ,
ಇರುವಾತನನು ಅವರರಿಯಲಿಲ್ಲ.
ಸೃಷ್ಟಿಯಾದ ವಸ್ತುಗಳನು ಗಮನಿಸಿ
ಸೃಷ್ಟಿಕರ್ತನನು ಗುರುತಿಸಲಿಲ್ಲ.

2 ಬದಲಿಗೆ ಅಗ್ನಿ, ಆವಿ, ವೇಗವಾಯು,
ತಾರಾಗಣ,
ಭೋರ್ಗರೆವ ಸಾಗರ, ಗಗನದ
ಜ್ಯೋತಿರ್ಮಂಡಲ
ಇವುಗಳೇ ಜಗವನ್ನಾಳುವ
ದೇವರೆಂದುಕೊಂಡರಲ್ಲಾ !
3 ಇವುಗಳಲ್ಲಿನ ಚೆಲುವಿಗೆ ಮಣಿದು
ಇವುಗಳನೇ ದೇವರೆಂದುಕೊಂಡರು.
ಗ್ರಹಿಸದೆ ಹೋದರು ಇವುಗಳ ಒಡೆಯ
ಇನ್ನೆಷ್ಟು ಮಿಗಿಲಾಗಿರಬೇಕೆಂದು!
ಸೌಂದರ್ಯಕೆ ಮೂಲವಾದ
ಸರ್ವೇಶ್ವರನೇ ನಿರ್ಮಿಸಿದನು
ಇವುಗಳನು.
4 ಇವುಗಳಲ್ಲಿನ ಗುಣಶಕ್ತಿಗೆ ಅಚ್ಚರಿಗೊಂಡು
ಹಾಗೆ ನುಡಿದಿದ್ದರೆ
ಇವುಗಳನು ರೂಪಿಸಿದವನೆಷ್ಟು ಶಕ್ತನೆಂದು
ತಿಳಿಯಲಿ ಅವುಗಳಿಂದಲೇ.
5 ಸೃಷ್ಟಿವಸ್ತುಗಳ ಸೌಂದರ್ಯ
ಮಹತ್ವಗಳಿಂದ
ಅವುಗಳ ಸೃಷ್ಟಿಕರ್ತನ ಸಾದೃಶ್ಯ ಸಾಧ್ಯ.
6 ಇಂಥವರ ಮೇಲೆ ಬರುವ ಅಪರಾಧ
ಅಂಥ ದೊಡ್ಡದೇನೂ ಅಲ್ಲ
ದೇವರನ್ನು ಹುಡುಕುವ ಆಶೆಯಿಂದಲೆ,
ತಪ್ಪುಹಾದಿ ಹಿಡಿದಿರಬಹುದಲ್ಲಾ.
7 ಸೃಷ್ಟಿಕಾರ್ಯಗಳ ನಡುವೆ ಬಾಳುತ್ತಾ
ವಿಚಾರಿಸುತ್ತಾರೆ ಮನಃಪೂರ್ವಕವಾಗಿ
ಭ್ರಮೆಗೊಳ್ಳುತ್ತಾರೆ ಅವುಗಳ ಸಹಜವಾದ
ಚೆಲುವಿಗೆ ಬೆರಗಾಗಿ.
8 ಹೀಗಿದ್ದರೂ ಇಂಥವರನೆ
ದೋಷಮುಕ್ತರೆನ್ನಲಾದೀತೆ?
9 ಪ್ರಪಂಚವನ್ನೇ ಶೋಧಿಸಿನೋಡುವ ಶಕ್ತಿ
ಇವರಲ್ಲಿದ್ದ ಮೇಲೆ
ಸೃಷ್ಟಿಗೇ ಒಡೆಯನಾದವನನು
ಅರಿತುಕೊಳ್ಳಲು ತಡವಾದುದೇಕೆ?

**ವಿಗ್ರಹಾರಾಧನೆ**

10 ಬೆಳ್ಳಿಬಂಗಾರಗಳಿಂದ ತಯಾರಿಸಿದ
ಕರಕುಶಲ ಪ್ರಾಣಿಗಳು
ಪುರಾತನ ಕಾಲದ ಕೆತ್ತನೆಯ ಕೇವಲ
ಕಲ್ಲಿನ ರೂಪಗಳು.

ಈ ಮುಂತಾದ ಕೈಕೆಲಸಗಳನ್ನು
ದೇವರುಗಳು ಎಂದುಕೊಂಡವರು,
ಹೀಗೆ ನಿರ್ಜೀವ ವಸ್ತುಗಳಲಿ ನಿರೀಕ್ಷೆ
ಇಟ್ಟವರು, ನಿರ್ಭಾಗ್ಯಸ್ತರು.
11 ಚತುರ ಬಡಗಿಯೊಬ್ಬನು ಕಡಿಯುತ್ತಾನೆ
ಸೂಕ್ತವಾದ ಮರವೊಂದನು
ಜಾಣತನದಿಂದ ಸುಲಿಯುತ್ತಾನೆ
ಅದರ ತೊಗಟೆಯನು
ಅಂದಚೆಂದವಾದ ರೂಪಕೊಟ್ಟು, ಅದರಿಂದ
ಮಾಡುತ್ತಾನೆ ಪ್ರಯೋಜನಕರ
ಪಾತ್ರೆಯನು.
12 ಕೆಲಸಮಾಡಿ ಮಿಕ್ಕ ತುಂಡುಗಳನ್ನು
ಹಾಕುತ್ತಾನೆ ಒಲೆಗೆ
ಹೊಟ್ಟೆ ತುಂಬಿಸಿಕೊಳ್ಳಲು ಅದರಿಂದ
ಮಾಡುತ್ತಾನೆ ಅಡಿಗೆ.
13 ಕೆಲಸಕ್ಕೆ ಬಾರದ ಈ ಚೆಕ್ಕೆಗಳಿಂದ ಸುಟ್ಟ
ತುಂಡೊಂದನ್ನು ತೆಗೆದುಕೊಳ್ಳುತ್ತಾನೆ.
ವಿರಾಮವೇಳೆಯಲ್ಲಿ ಶ್ರಮದಿಂದದನು
ಕೆತ್ತಿ ಅದಕೆ ಮನುಷ್ಯರೂಪ
ಕೊಡುತ್ತಾನೆ.
14 ಇಲ್ಲವೆ, ಅದನ್ನು ಕ್ಷುಲ್ಲಕ ಪ್ರಾಣಿಯನ್ನಾಗಿ
ಕೆತ್ತಿ, ಬಳಿಯುತ್ತಾನೆ ಬಣ್ಣ
ಅದರ ಕರೆಗಳನ್ನೆಲ್ಲಾ ಮುಚ್ಚಿಬಿಡುತ್ತಾನೆ
ಹಚ್ಚಿ ಕೆಂಬಣ್ಣ.
15 ಅದಕ್ಕಾಗಿ ತಕ್ಕ ಗೂಡನು ನಿರ್ಮಿಸುತ್ತಾನೆ
ಗೋಡೆಯೊಳು
ಅದನು ಭದ್ರಪಡಿಸುತ್ತಾನೆ ಕಬ್ಬಿಣದ
ಮೊಳೆ ಹೊಡೆದು.
16 ಅವನಿಗೆ ಗೊತ್ತು ಅದು ತನ್ನಷ್ಟಕ್ಕೆ
ಸಹಾಯಮಾಡಿಕೊಳ್ಳಲಾರದೆಂದು
(ಪರರ ಸಹಾಯದ ಅವಶ್ಯಕತೆಯಿರುವ
ಅದು ವಿಗ್ರಹವಲ್ಲದೆ ಮತ್ತೇನು?)
ಎಂದೇ, ನೋಡಿಕೊಳ್ಳುತ್ತಾನೆ ಅದು ಕೆಳಕ್ಕೆ
ಬೀಳಬಾರದೆಂದು.
17 ತರುವಾಯ ನಾಚಿಕೊಳ್ಳದೆ ಬರುತ್ತಾನೆ
ಅದರೊಡನೆ ಮಾತಾಡುವುದಕ್ಕಾಗಿ
ಬೇಡಿಕೊಳ್ಳುತ್ತಾನೆ ಆಸ್ತಿಪಾಸ್ತಿಗಾಗಿ,
ಮಡದಿ ಮಕ್ಕಳಿಗಾಗಿ.
18 ಬಲಹೀನವಾದ ಅದಕ್ಕೆ ಮೊರೆಯಿಡುತ್ತಾನೆ
ಆರೋಗ್ಯಭಾಗ್ಯಕ್ಕಾಗಿ

ಪ್ರಾಣವಿಲ್ಲದದರ ಬಳಿ ಪ್ರಾರ್ಥಿಸುತ್ತಾನೆ
ಪ್ರಾಣದಾನಕ್ಕಾಗಿ
ನೆರವಿನ ಅನುಭವವೇ ಇಲ್ಲದುದನ್ನು
ಕೋರುತ್ತಾನೆ ಸಹಾಯಕ್ಕಾಗಿ
ಒಂದು ಹೆಜ್ಜೆ ಮುಂದಿಡಲಾರದುದನ್ನು
ಕೇಳಿಕೊಳ್ಳುತ್ತಾನೆ ಸುಖಪ್ರಯಾಣಕ್ಕಾಗಿ,
ಲಾಭಕ್ಕಾಗಿ, ಸಂಪಾದನೆಗಾಗಿ, ಕಸಬಿನ
ಯಶಸ್ಸಿಗಾಗಿ
ಕೈಗಳಿದ್ದೂ ಅಶಕ್ತವಾಗಿರುವುದನ್ನು
ಅಂಗಲಾಚಿಕೊಳ್ಳುತ್ತಾನೆ ಶಕ್ತಿಗಾಗಿ.

### ಮರಣದ ಬೊಂಬೆ–ಮರದ ನಾವೆ

**14** ವ್ಯಕ್ತಿಯೊಬ್ಬನು ಹೊರಡುತ್ತಾನೆ
ಸಮುದ್ರ ಪ್ರಯಾಣ ಮಾಡಲು
ಹುಚ್ಚು ತೆರೆಗಳ ನಡುವೆ ಹಾಯ್ದು
ಹೋಗುವುದಕ್ಕಿರುವ ನಾವೆಗಿಂತಲೂ
ಮೊರೆಯಿಡುತ್ತಾನೆ ಒಂದು ತುಂಡು
ಮರಕ್ಕೆ, ನೆರವಾಗಲೆಂದು.
2 ನಾವೆಯೇನೋ ತಯಾರಾಯಿತು
ಲಾಭದ ಆಶೆಯಿಂದ
ಸಿದ್ಧವಾಯಿತು ಜ್ಞಾನವೆಂಬ
ಕುಶಲತೆಯಿಂದ.
3 ಆದರೆ ಎಲೈ ತಂದೆಯೇ,
ಅದನ್ನು ಸಾಗಿಸುತ್ತದೆ ನಿಮ್ಮ ಅನುಗ್ರಹ
ಕಡಲಲ್ಲಿ ಹಾದಿಯನ್ನೂ ಅಲೆಗಳ ನಡುವೆ
ಸುರಕ್ಷತೆಯನ್ನೂ ನೀಡುವಾತ ನೀನಯ್ಯಾ !
4 ಅನುಭವವಿಲ್ಲದವನೂ ಸಮುದ್ರ
ಪ್ರಯಾಣ ಕೈಗೊಳ್ಳಬಹುದು
ನೀನೇ ಎಲ್ಲ ಆಪತ್ತುಗಳಿಂದ ರಕ್ಷಿಸ
ಬಲ್ಲಾತನೆಂದು ಅರಿತು.
5 ನಿಮ್ಮ ಜ್ಞಾನದಿಂದಾದ ಕಾರ್ಯಗಳು
ನಿಷ್ಪ್ರಯೋಜಕವಾಗಬಾರದೆಂಬುದು
ನಿಮ್ಮ ಇಚ್ಛೆ.
ಎಂದೇ ಆ ಮರದ ತುಂಡನ್ನೇ ಪ್ರಾಣದ
ಆಧಾರವನ್ನಾಗಿಟ್ಟುಕೊಳ್ಳುತ್ತಾರೆ;
ಅಲ್ಲೋಲ ಕಲ್ಲೋಲವಾದ ಸಮುದ್ರವನ್ನೇ
ಸುರಕ್ಷಿತವಾಗಿ ದಾಟಿಬರುತ್ತಾರೆ.
6 ಪುರಾತನ ಕಾಲದಲ್ಲಿ ಗರ್ವಿಷ್ಠರಾದ
ಮಹಾ ಶರೀರಗಳು

ನಾಶವಾಗುತ್ತಿರಲು
ಲೋಕದ ನಿರೀಕ್ಷೆ ನಿಮ್ಮ ಕೈಯಿಂದಲೇ
ಕಾರ್ಯಗತವಾಯಿತು.
ಒಂದು ನಾವೆಯನು ಆಶ್ರಯಿಸಿಕೊಂಡದ್ದ
ರಿಂದ ಮುಂದಿನ ಕಾಲಕೆ
ಪೀಳಿಗೆಯೊಂದುಳಿಯಿತು.
7 ಯಾವ ಮರದಿಂದ ನ್ಯಾಯನೀತಿ
ಸ್ಥಾಪಿತವಾಯಿತೊ
ಆ ಮರವು ಧನ್ಯವಾದುದೇ.
8 ಆದರೆ ಕೈಯಿಂದ ಕೆತ್ತಿದ ವಿಗ್ರಹವೂ
ಅದನ್ನು ಕೆತ್ತಿದವನೂ ಶಾಪಗ್ರಸ್ತರೇ
ಕಾರಣ–ಅಳಿವ ಆ ವಸ್ತು ದೇವರೆನಿಸಿ
ಕೊಂಡಿತು; ಅದನು ಕೆತ್ತಿದವನು
ಮಾನವನೇ ಅಲ್ಲವೆ?
9 ದುಷ್ಟನೂ ಅವನ ದುಷ್ಟಕಾರ್ಯವೂ
ಸಮನಾಗಿಯೇ ಅಸಹ್ಯವಾದುವು ದೇವರಿಗೆ.
10 ಕೃತಿಯು ತನ್ನ ಗೈದವನೊಂದಿಗೆ
ದಂಡನೆಗೆ ಗುರಿಯಾಗುವುದು ಖರೆ.
11 ಅನ್ಯಜನಗಳ ವಿಗ್ರಹಗಳಿಗೂ
ದಂಡನೆಯಾಗುವುದು.
ಕಾರಣ–ದೇವರಿಂದಾದ ವಸ್ತುಗಳಿಂದಲೇ
ಅವು ರೂಪುಗೊಂಡವು
ಅಸಹ್ಯ ವಸ್ತು, ನರಾತ್ಮಗಳಿಗೆ ಎಡರು,
ಮೂಢರ ಕಾಲಿಗೆ ಉರುಲು.

### ವಿಗ್ರಹಾರಾಧನೆಯ ಆರಂಭ

12 ವಿಗ್ರಹಗಳ ರಚನೆ ವ್ಯಭಿಚಾರಕ್ಕೆ ಆರಂಭವು
ಅವುಗಳ ಯೋಜನೆ ಸಜ್ಜೀವನಕ್ಕೆ ಅಳಿವು.
13 ವಿಗ್ರಹಗಳು ಆದಿಯಿಂದಲೂ
ಇದ್ದವುಗಳಲ್ಲ
ಅನಂತವಾಗಿಯೂ ಇರುವಂಥವುಗಳಲ್ಲ.
14 ಅವು ಲೋಕವನು ಪ್ರವೇಶಿಸಿದ್ದು
ಮಾನವನ ಒಣಹೆಮ್ಮೆಯಿಂದ
ಎಂದೇ, ಅವು ಕೊನೆಗೊಳ್ಳುವ ವ್ಯವಸ್ಥೆ
ಆಗಿದೆ ತ್ವರಿತದಿಂದ.
15 ತಂದೆಯೊಬ್ಬನು ತನ್ನ ಮಗನ ಅಕಾಲಿಕ
ಮರಣದಿಂದ ದುಃಖಕ್ಕೊಳಗಾದ
ಶೋಕ ತಾಳಲಾಗದೆ, ಅವನ ಪ್ರತಿಮೆ
ಒಂದನು ಮಾಡಿಕೊಂಡ.
ದಿವಂಗತನಾದ ಮಗನನೇ ದೇವರೆಂದು

ಗೌರವಿಸಲಾರಂಭಿಸಿದ
ತನ್ನ ಅಧೀನರಿಗೆ ಪೂಜೆ–ಪುನಸ್ಕಾರಗಳ
ಆಚರಣೆಯನು ಹೇಳಿಕೊಟ್ಟ.
16 ಕ್ರಮೇಣ ಈ ದುಷ್ಟಪದ್ಧತಿ ಪ್ರಬಲವಾಗಿ
ವಿಧಿರೂಪ ತಾಳಿತು
ಅರಸನ ಅಪ್ಪಣೆಯ ಮೇರೆಗೆ ವಿಗ್ರಹಗಳು
ಪೂಜಿತವಾದವು.
17 ದೂರವಿದ್ದ ಅರಸನಿಗೆ ಪ್ರತ್ಯಕ್ಷ ಗೌರವ
ಸಲ್ಲಿಸಲಾಗದೆ ಹೋಯಿತು
ಎಂದೇ, ಆ ದೂರವಿದ್ದವನ
ಪ್ರತಿಬಿಂಬವನು ಪ್ರಜ್ಞೆಯಿಂದ
ಕಲ್ಪಿಸಲಾಯಿತು.
ಕಣ್ಮುಂದೆ ಇದ್ದಂತೆ ಸನ್ಮಾನಿಸಲು
ಪ್ರತಿಮೆಯೊಂದನು ಮಾಡಲಾಯಿತು
ಹೀಗೆ ಮುಖಸ್ತುತಿ ಮಾಡುವ ಗೀಳನು
ಪೂರೈಸಲಾಯಿತು.
18 ಅರಸನನು ಅರಿಯದಿದ್ದವರೂ ಪಡೆದರು
ಪ್ರೇರಣೆ ಮೂರ್ತಿಪೂಜೆಗೆ
ಇದಕೆ ಕಾರಣವಾಯಿತು ಆಸಕ್ತನಾದ
ಕಲಾವಿದನ ಮಹತ್ವಾಕಾಂಕ್ಷೆ.
19 ಅಧಿಕಾರಿಯನು ಮೆಚ್ಚಿಸಲು
ಪ್ರಯೋಗಿಸಿರಬೇಕು
ಇವನು ತನ್ನ ಕಲಾಕುಶಲತೆಯನ್ನೆಲ್ಲಾ
ಬಹುಶಃ ನೀಡಿರಬೇಕು ನಿಜಸ್ಥಿತಿಗಿಂತಲೂ
ಹೆಚ್ಚಿನ ಸೌಂದರ್ಯ.
20 ಅವನ ಕೈಕೆಲಸದ ಸೊಬಗಿನಿಂದ
ಆಕರ್ಷಿತವಾದ ಜನಜಂಗುಳಿಯು
ಹಿಂದೆ ಮನುಷ್ಯನಾಗಿ ಸನ್ಮಾನಿತನಾದವನನು
ದೇವಪೂಜಾರ್ಹನೆಂದು ಎಣಿಸತೊಡಗಿತು.
21 ಸಜ್ಜೀವನಕೆ ಇದೊಂದು ಮೋಸದ
ಜಾಲವಾಯಿತು
ದೌರ್ಭಾಗ್ಯದಿಂದಲೋ ದಬ್ಬಾಳಿಕೆ
ಯಿಂದಲೋ ಪೀಡಿತರಾದ ಜನರು
ಕಲ್ಲುಕಂಬಗಳಿಗಿತ್ತರು, ದೇವರಿಗೆ ಹೊರತು
ಬೇರಾರಿಗೂ ಸಲ್ಲದ, ಹೆಸರನು.

**ವಿಗ್ರಹಾರಾಧನೆಯ ಪರಿಣಾಮ**

22 ದೇವರ ಬಗ್ಗೆ ಅವರಿಗಿದ್ದ ಈ ತಪ್ಪು ಕಲ್ಪನೆ
ಸಾಲದೆಂದು
ಅಜ್ಞಾನವೆಂಬ ಘೋರವಾದ ಅನಿಷ್ಟ

ಕದನಕ್ಕಿಳಿದರು.
ಅದು ಮಾತ್ರವಲ್ಲ, ಇಂಥ ವಿಷಯ
ಸ್ಥಿತಿಯನು ಶಾಂತಿಯೆಂದೆಣಿಸಿದರು!
23 ಹಸುಳೆಗಳನು ಬಲಿಕೊಟ್ಟು, ಗುಟ್ಟಾದ
ಪೂಜಾಪದ್ಧತಿಗಳನು ಆಚರಿಸಿದರು
ಸ್ವಧರ್ಮ ವಿರುದ್ಧವಾದ ದುಂದೌತಣ,
ಪಾನವಿಲಾಸಗಳಲಿ ಮೈಮರೆತರು.
24 ಜೀವನದಲ್ಲಾಗಲಿ, ದಾಂಪತ್ಯದಲ್ಲಾಗಲಿ
ಪವಿತ್ರತೆಯನವರು ಕಾಪಾಡಲಿಲ್ಲ.
ಬದಲಿಗೆ ದ್ರೋಹಬಗೆದು ಒಬ್ಬರನ್ನು
ಒಬ್ಬರು ಕೊಲೆಮಾಡಿದರು
ವ್ಯಭಿಚಾರ ಮಾಡಿ, ಒಬ್ಬನು ಮತ್ತೊಬ್ಬ
ನನು ಸಂಕಟಕ್ಕೀಡುಮಾಡಿದನು.
25 ಎಲ್ಲಾಕಡೆ ತುಂಬಿಕೊಂಡವು ರಕ್ತಪಾತ,
ಕೊಲೆ, ಕಳವು, ಮೋಸ
ಭ್ರಷ್ಟಾಚಾರ, ನಂಬಿಕೆದ್ರೋಹ, ಕಲಹ,
ಸುಳ್ಳುಪ್ರಮಾಣ;
26 ಸಜ್ಜನರ ಹಿಂಸೆ, ಕೃತಘ್ನತೆ,
ಹೊಲೆ, ಗಡುಕುತನ, ಹಾದರ,
ಅಕ್ರಮ ವಿವಾಹ, ವ್ಯಭಿಚಾರ,
ಕಾಮವಿಲಾಸ, ದ್ರೋಹ ಇತ್ಯಾದಿ.
27 ಇಂಥ ಅಕ್ರಮಗಳಿಗೆ ಆದಿ, ಅಂತ್ಯ ಕಾರಣ
ಈ ಅವಾಚ್ಯ ವಿಗ್ರಹಗಳ ಆರಾಧನ.
28 ಇಂಥವರು ಸಂತೋಷಪಡುತ್ತಾರೆ
ಹುಚ್ಚರಂತೆ
ಅವರು ಮಾಡುವುದು ಸುಳ್ಳು ಪ್ರವಾದನೆ;
ಬಾಳುತ್ತಾರೆ ನೀತಿಗೆಟ್ಟವರಾಗಿ
ಸುಳ್ಳಾಣೆಯಿಡುತ್ತಾರೆ ಸುಲಭವಾಗಿ.
29 ಜೀವವಿಲ್ಲದ ವಿಗ್ರಹಗಳಲ್ಲಿ
ನಂಬಿಕೆಯಿಡುವುದರಿಂದ,
ಸುಳ್ಳಾಣೆಯಿಡುವುದರಿಂದ,
ಹಾನಿಯಿಲ್ಲ ಎಂಬುದು ಅವರ ಇಂಗಿತ.
30 ಇಮ್ಮಡಿ ಅಪರಾಧಗಳಿಗಾಗಿ ಅವರು
ಗುರಿಯಾಗುವರು ನ್ಯಾಯವಾದ ದಂಡನೆಗೆ:
ದೇವರಲ್ಲಿ ತಪ್ಪುಭಾವನೆ ತಾಳಿ
ಶರಣಾದರು ವಿಗ್ರಹಗಳಿಗೆ
ಪವಿತ್ರವಾದುದನ್ನಲಕ್ಷಿಸಿ, ಸುಳ್ಳು ಪ್ರಮಾಣ
ದಿಂದ ವಂಚಕರಾದರು ಇತರರಿಗೆ.
31 ದುರ್ಜನರನ್ನು ಬೆನ್ನಟ್ಟಿ ಬರುವುದು
ಅವರು ಪ್ರಮಾಣಮಾಡಿ ಹೇಳುವಾ

ವಸ್ತುಗಳ ಶಕ್ತಿಯಲ್ಲ
ಅವರ ಪಾಪಗಳಿಗೆ ನ್ಯಾಯವಾದ ಶಿಕ್ಷೆ
ಮಾತ್ರ.

### ನಿಜದೇವರು ನೀಡುವ ವರ: ಅಮರತ್ವ

**15** ನಮ್ಮ ದೇವರೇ, ನೀವಾದರೋ,
ದಯಾಳು, ಸತ್ಯವಂತರು
ಸಹನಾಶೀಲರು, ಕರುಣೆಯಿಂದ ಎಲ್ಲವನ್ನು
ಪರಿಪಾಲಿಸುವವರು.
2 ನಾವು ಪಾಪಿಗಳಾದರೂ ನಿಮ್ಮವರೇ
ಆಗಿದ್ದೇವೆ
ನಿಮ್ಮ ಶಕ್ತಿಸಾಮರ್ಥ್ಯವನ್ನು ಅರಿತಿದ್ದೇವೆ
ನಿಮ್ಮವರೆಂದು ತಿಳಿದು ಪಾಪದಿಂದ
ದೂರವಿರುತ್ತೇವೆ.
3 ನಿಮ್ಮನ್ನು ಅರಿವುದೇ ಸಂಪೂರ್ಣ ಸತ್ಯ
ನಿಮ್ಮ ಶಕ್ತಿಯ ತಿಳಿವು ಅಮರತ್ವಕೆ
ಮೂಲ.
4 ಮನುಷ್ಯ ಜಾಣ್ಮೆಯಿಂದಾದ
ಕಲಾಕೃತಿಯಿಂದಾಗಲಿ
ಬಣ್ಣಗಾರನ ಬೆಡಗಿನ
ದುಡಿಮೆಯಿಂದಾಗಲಿ
ರಂಗುರಂಗಿನ ವಿಗ್ರಹಗಳಿಂದಾಗಲಿ
ಹಿಡಿದಿಲ್ಲ ನಾವು ಅಡ್ಡಹಾದಿ.
5 ಇವುಗಳ ನೋಟವೇ ಸಾಕು, ಮೂರ್ಖರಲ್ಲಿ
ದುರಾಶೆ ಕೆರಳಿಸಲು
ಉಸಿರಿಲ್ಲದ ರೂಪದತ್ತ ಅವರನು
ಆಕರ್ಷಿಸಲು.
6 ಇವುಗಳನು ಮಾಡುವವರು, ಬಯಸು
ವವರು ಹಾಗೂ ಪೂಜಿಸುವವರು
ಕೇಡನ್ನು ಪ್ರೀತಿಸುವಂಥವರು, ಅದರ
ನಿರೀಕ್ಷೆಗೆ ಅವರು ಪಾತ್ರರು.

### ಕುಂಬಾರ ಮಾಡಿದ ಬೊಂಬೆ

7 ಕುಂಬಾರ ಪ್ರಯಾಸದಿಂದ ನಾದುತ್ತಾನೆ
ಜೇಡಿಮಣ್ಣನು
ನಮ್ಮ ಪ್ರಯೋಜನಕ್ಕಾಗಿ ರೂಪಿಸುತ್ತಾನೆ
ಮಡಕೆಯನು.
ಉಚ್ಚ ಬಳಕೆಗೂ ನೀಚಬಳಕೆಗೂ ಅದೇ
ಮಣ್ಣನು ಪ್ರಯೋಗಿಸುತ್ತಾನೆ

ಯಾವ ಬಳಕೆಗೆ ಯಾವ ಮಡಕೆ ಎಂದು
ನಿಶ್ಚಯಿಸುವವನು ಅವನೇ.
8 ತುಸುಕಾಲಕ್ಕೆ ಹಿಂದೆ ತಾನೇ ಉಂಟಾದನು
ಮಣ್ಣಿನಿಂದ
ತನ್ನ ಪ್ರಾಣ ಋಣವನು ತೀರಿಸಬೇಕೆಂಬ
ಕೇಳಿಕೆ ಬಂದಾಗ
ಅದೇ ಮಣ್ಣಿಗೆ ಮರಳುತ್ತಾನೆ ತುಸು
ಕಾಲದ ನಂತರ.
ರೂಪಿಸುತ್ತಾನೆ ಸುಳ್ಳು ದೇವರನು ಅದೇ
ಕುಂಬಾರ; ಅದೆಂಥ ನಿರರ್ಥಕ ಕೆಲಸ!
9 ಸಾಯಲೇಬೇಕಾದರೂ ಜೀವನ ಕಿಂಚಿತ್ತು
ಎಂಬ ಚಿಂತೆಯಿಲ್ಲ ಅವನಿಗೆ
ಸ್ಪರ್ಧಿಸುತ್ತಾನೆ ಬೆಳ್ಳಿಬಂಗಾರದ ಅಕ್ಕ
ಸಾಲಿಗರ, ಕಂಚುಗಾರರ ಜೊತೆಗೆ
ತಾನೂ ಕೃತಕ ವಸ್ತುಗಳ ಮಾಡಬಲ್ಲೆ
ಎಂಬುದೇ ಅವನ ಪೆರ್ಮೆ.
10 ಬೂದಿಯಂತೆ ಅವನ ಹೃದಯ
ಅವನ ನಿರೀಕ್ಷೆ ಕಸಕ್ಕೆ ಸಮಾನ
ಜೇಡಿಗಿಂತ ಹೀನ ಅವನ ಜೀವನ.
11 ಕಾರಣ–ಅವನು ಅರಿತಿಲ್ಲ ತನ್ನ
ರೂಪಿಸಿದಾತನನು
ಪ್ರಾಣ ಊದಿ ತನ್ನನು ಸಚೇತನ
ಗೊಳಿಸಿದವನನು
ತನಗೆ ಜೀವಾತ್ಮವನು
ದಯಪಾಲಿಸಿದವನನು.
12 ಅವನ ಪಾಲಿಗೆ ನಮ್ಮೀ ಬಾಳು ಆಟದ
ಸಾಮಾನು
ಹಣ ಸಂಪಾದನೆಗಾಗಿರುವ ಸಂತೆಬಜಾರು
ಏನೇ ಆಗಲಿ, ರೀತಿ ಎಂತದೇ ಇರಲಿ,
ಲಾಭವೇ ಅವನ ಗೀಳು.
13 ಒಡೆಯನಿಗೆ ಮಡಕೆಗಳನು, ಮೂರ್ತಿಗಳನು
ಮಾಡುತ್ತಾನೆ ಸುಲಭವಾಗಿ
ವಿಗ್ರಹ ಮಾಡುವುದು ಪಾಪವೆಂದು
ಇತರರಿಗಿಂತಲು ಬಲ್ಲನು ಚೆನ್ನಾಗಿ.

### ಈಜಿಪ್ಟರಲ್ಲಿ ವಿಗ್ರಹಾರಾಧನೆ

14 ಆದರೆ ನಿಮ್ಮ ಪ್ರಜೆಯನು ಪೀಡಿಸಿದ
ಶತ್ರುಗಳು
ಎಲ್ಲರಿಗಿಂತ ನಿರ್ಭಾಗ್ಯರು, ಮಕ್ಕಳಿಗಿಂತ
ಬುದ್ಧಿಹೀನರು.

15 ದೇವರೆಂದೆಣಿಸಿದರವರು ಜನಾಂಗಗಳ
ಸಕಲ ಪ್ರತಿಮೆಗಳನು
ನೋಡಲು ಅವಕ್ಕೆ ಕಣ್ಣಿಲ್ಲ, ಉಸಿರಾಡಲು
ಮೂಗಿಲ್ಲ,
ಕೇಳಲು ಕಿವಿಯಿಲ್ಲ, ಮುಟ್ಟಲು ಬೆರಳಿಲ್ಲ,
ನಡೆಯಲು ಕಾಲಿಗೆ ಬಲವಿಲ್ಲ.
16 ಅವುಗಳನ್ನು ಮಾಡಿದವನು ಮನುಷ್ಯ
ಮಾತ್ರದವನು
ತನ್ನ ಪ್ರಾಣವನ್ನೇ ಸಾಲವಾಗಿ ಪಡೆದಿರುವ
ಇವನು
ತನ್ನಂತೆ ದೇವರನು ರೂಪಿಸಲು
ಅಸಮರ್ಥನು.
17 ನಿರ್ಜೀವವಾದುವು ಮರ್ತ್ಯಮಾನವನ
ದುರ್ಬಲ ಕೈಗಳಿಂದ ಆದವು.
ಅವನು ಪೂಜಿಸುವ ವಸ್ತುಗಳಿಗಿಂತ ಅವನೇ
ಮೇಲಾದವನು.
ಏಕೆಂದರೆ ಅವುಗಳಲ್ಲಿಲ್ಲದ ಪ್ರಾಣ
ಅವನಲ್ಲಿರುವುದು.
18 ಅಸಹ್ಯವಾದ ಪ್ರಾಣಿಗಳನು ಪೂಜಿಸುತ್ತಾರೆ
ಆ ಶತ್ರುಗಳು
ಬುದ್ಧಿಹೀನತೆಯಲಿ ಇತರ ಪ್ರಾಣಿಗಳಿ
ಗಿಂತಲೂ ಬೀಳು ಅವುಗಳು.
19 ಅವೇನೂ ಅಷ್ಟು ಸುಂದರವಾಗಿಲ್ಲ
ಬೇರೆ ಪ್ರಾಣಿಗಳಿಗಿಂತ
ದೇವರ ಹೊಗಳಿಕೆಗೂ ಆಶೀರ್ವಾದಕೂ
ಅವು ಬಾಹಿರ.

**16** ಈ ಕಾರಣ ಆ ಜನರು ಬಾಧಿತ
ರಾದರು ಅಂಥ ಪ್ರಾಣಿಗಳಿಂದಲೇ
ನೋವುಬಾಧೆಗಳಿಗೆ ಒಳಗಾದರು ಆ
ವಿಶೇಷ ಜಂತುಗಳಿಂದಲೇ.
2 ಇಂಥ ಶಿಕ್ಷೆಗೆ ಬದಲಾಗಿ ಹಿತಗೈದಿರಿ
ದೇವಾ ನಿಮ್ಮ ಜನರಿಗೆ
ಅಪೂರ್ವ ಲಾವಕ್ಕಿಭೋಜನ ಸಿದ್ಧಿ
ಮಾಡಿದಿರಿ
ಅವರ ಹಸಿವು ಬಯಕೆಗಳ ಇಂಗಿಸಲಿಕೆ.
3 ಶತ್ರುಗಳು ಹಸಿದಿದ್ದಾಗ ಕಳುಹಿಸಲಾದ
ಅಸಹ್ಯಪ್ರಾಣಿಗಳನ್ನು ಕಂಡು
ಅಗತ್ಯವಾದ ಅನ್ನವನ್ನು ಕೂಡ

ಹೇಸಿಕೊಳ್ಳುವಂತಾಯಿತು!
ನಿಮ್ಮ ಜನರು ತುಸುಕಾಲ ಹಸಿದು
ಬಳಲಿದರಾದರೂ
ಅಪೂರ್ವ ಆಹಾರವನ್ನು ಊಟ
ಮಾಡುವಂತಾಯಿತು.
4 ಆ ಹಿಂಸಕರು ಕಠಿಣವಾದ ಕೊರತೆಯನ್ನು
ಅನುಭವಿಸುವುದು ಉಚಿತವಾಗಿತ್ತು
ಶತ್ರುಗಳಿಗಾದ ಸಂಕಟವನು ನಿಮ್ಮವರಿಗೆ
ತೋರಿಸುವುದು ಮಾತ್ರ ಬೇಕಾಗಿತ್ತು.
5 ಭೀಕರ ಕಾಡುಮೃಗಗಳು ನಿಮ್ಮವರ ಮೇಲೆ
ಎರಗಿಬಂದಾಗಲು
ಕೆಟ್ಟ ಹಾವುಗಳ ಕಡಿತದಿಂದ ಇವರು
ನಾಶವಾಗುತ್ತಿದ್ದಾಗಲು
ನಿಮ್ಮ ಕೋಪಾವೇಶವು ಉಳಿಯಲಿಲ್ಲ
ಕೊನೆಯವರೆಗು.
6 ಬುದ್ಧಿ ಕಲಿಯುವ ಸಲುವಾಗಿ,
ವಿಧಿನಿಯಮಗಳನು
ನೆನಪಿನಲ್ಲಿಡುವುದಕ್ಕಾಗಿ,
ರಕ್ಷಣೆಯ ಗುರುತು ದೊರಕಲಿಕ್ಕಾಗಿ,
ಇವರು ಸಂಕಟಪಟ್ಟರು ತಾತ್ಕಾಲಿಕವಾಗಿ.
7 ಇವರ ಪ್ರಾಣ ರಕ್ಷಣೆಯಾದುದು
ಆ ಗುರುತನು ನೋಡಿದ್ದರಿಂದಲ್ಲ
ಅದು ಸಾಧ್ಯವಾಯಿತು ಸರ್ವರ
ಉದ್ಧಾರಕನಾದ ನಿಮ್ಮಿಂದ.
8 ಹೀಗೆ ಸಕಲ ಕೇಡುಗಳಿಂದ ಬಿಡಿಸುವಾತ
ನೀವೇ ಎಂದು
ನಮ್ಮ ಶತ್ರುಗಳಿಗೆ ಮಾಡಿಕೊಟ್ಟಿರಿ
ಮನದಟ್ಟು.
9 ಅವರನು ಕಡಿದುಕೊಂದವು ಮಿಡಿತೆ
ಹಾಗು ನೊಣಗಳು
ಅವರ ಪ್ರಾಣವನ್ನುಳಿಸಲು ಯಾವ
ಸಾಧನವೂ ಇಲ್ಲವಾಯಿತು.
ಕಾರಣ – ಅಂತಹ ಶಿಕ್ಷೆಗೆ ಅವರು
ಪಾತ್ರರಾಗಿದ್ದರು.
10 ನಿಮ್ಮ ಮಕ್ಕಳಿಗಾದರೋ ಸೋಲು
ಸಂಭವಿಸಲಿಲ್ಲ ವಿಷಸರ್ಪಗಳ ಹಲ್ಲಿಂದ
ಅವರು ಗುಣಹೊಂದಿದರು, ನಿಮ್ಮ ದಯೆ
ಅವರಿಗೆ ಆಧಾರವಾಗಿದ್ದುದರಿಂದ.
11 ಕಡಿತಕ್ಕೆ ಗುರಿಯಾದರು ನಿಮ್ಮಾಜ್ಞೆಗಳನು
ನೆನಪಿನಲ್ಲಿಟ್ಟುಕೊಳ್ಳಲೆಂದು

ಬೇಗನೆ ಗುಣವಾದರು ನಿಮ್ಮನ್ನು ಪೂರ್ತಿ
ಮರೆತುಹೋಗಬಾರದೆಂದು
ನಿಮ್ಮ ಕಾರುಣ್ಯದಿಂದ ಅವರು
ದೂರವಾಗಬಾರದೆಂದು.
12 ಅವರು ಗುಣಹೊಂದಿದ್ದು ಯಾವುದೋ
ಗಿಡಮೂಲಿಕೆಯಿಂದಲ್ಲ
ಮೆತ್ತಗೆ ಮಾಡುವಂಥ ಯಾವುದೋ
ಮುಲಾಮಿನಿಂದಲ್ಲ.
ಅದಾಯಿತು ಹೇ ಸರ್ವೇಶ್ವರಾ, ಎಲ್ಲವನ್ನು
ಸ್ವಸ್ಥವಾಗಿಸುವ ನಿಮ್ಮ ವಾಕ್ಯದಿಂದ.
13 ಸಾವು ಜೀವಗಳ ಮೇಲೆ ನಿಮಗುಂಟು
ಅಧಿಕಾರ
ನೀವೇ ಪಾತಾಳದ ದ್ವಾರಗಳ ಬಳಿಗೆ
ನಡೆಸುವಾತ
ನೀವೇ ಅಲ್ಲಿಂದ ಮೇಲಕ್ಕೆ ಕರೆದು
ತರುವಾತ.
14 ದುಷ್ಟತನದಿಂದ ಕೊಲೆಮಾಡಬಹುದು
ಮನುಜ
ಹೊರಟುಹೋದ ಜೀವಾತ್ಮವನ್ನಾತ
ಹಿಂದಿರುಗಿಸಲಾರ
ಪಾತಾಳ ಸೇರಿದ ಪ್ರಾಣವನ್ನು ಬಿಡಿಸಿ
ತರಲಾರ.
15 ಆದರೂ ದೇವಾ,
ನಿಮ್ಮ ಕೈಯಿಂದ ತಪ್ಪಿಸಿಕೊಳ್ಳಲಾಗದಯ್ಯಾ !
16 ದುರುಳರು ನಿಮ್ಮನು ಅಂಗೀಕರಿಸಲಿಲ್ಲ
ದೇವರೆಂದು
ನಿಮ್ಮ ಭುಜಬಲದಿಂದ ಅವರು
ಹಿಂಸೆಗೀಡಾದರಂದು.
ಅಸಾಧಾರಣ ಮಳೆ, ಪ್ರಚಂಡ ಮಾರುತ,
ಆಲಿಕಲ್ಲು,
ಇವು ಅವರನು ಬೆನ್ನಟ್ಟಿಕೊಂಡು ಹೋದವು
ಬೆಂಕಿ ಅವರನು ಪೂರ್ತಿಯಾಗಿ
ದಹಿಸಿಬಿಟ್ಟಿತು.
17 ಅತಿಶಯವೆಂದರೆ – ಎಲ್ಲವನು ನಂದಿಸುವ
ನೀರಲ್ಲೆ ಅಗ್ನಿ ಪ್ರಬಲವಾದುದು
ಅಂತೆಯೇ ಸಜ್ಜನರ ಪರವಾಗಿ ಲೋಕವಿಡೀ
ಹೋರಾಡುವುದು ಸಹಜ.
18 ಒಮ್ಮೆ, ದುರುಳರ ವಿರುದ್ಧ ಕಳುಹಿಸಲಾದ
ಮೃಗಗಳನ್ನು
ಅಗ್ನಿ ಸುಡದೆ ಶಮನವಾಯಿತು.

ಇದನ್ನು ಕಂಡವರು ದೇವರ ದಂಡನಾ
ತೀರ್ಪು ತಮ್ಮನ್ನು ಬೆನ್ನಟ್ಟಿದೆಯೆಂದು
ಅರಿವಂತಾಯಿತು.
19 ಇನ್ನೊಮ್ಮೆ, ದುರುಳರ ಹೊಲಗಳಲ್ಲಿದ್ದ
ಪೈರುಗಳನ್ನು ನಾಶಮಾಡಲು
ನೀರಿನಲ್ಲೂ ಅಗ್ನಿ ತನ್ನ ಶಕ್ತಿಗಿಂತ
ಮಿಗಿಲಾಗಿ ಉರಿಯಿತು.
20 ನಿಮ್ಮ ಜನರಿಗಾದರೋ, ದೇವದೂತರ
ಆಹಾರವನ್ನು ಬಡಿಸಿದಿರಿ;
ಶ್ರಮವಿಲ್ಲದೆ ಸಿದ್ಧವಾದ, ರುಚಿಕರವಾದ,
ಎಲ್ಲರಿಗು ಒಗ್ಗುವಂಥ ರೊಟ್ಟಿಯನ್ನು
ನೀವವರಿಗೆ ಪರಲೋಕದಿಂದ ಕೊಟ್ಟಿರಿ.
21 ನೀವಿತ್ತ ಪದಾರ್ಥ ವ್ಯಕ್ತಪಡಿಸಿತು ನಿಮ್ಮ
ಮಕ್ಕಳ ಬಗ್ಗೆ ನಿಮಗಿದ್ದ ವಾತ್ಸಲ್ಯವನು
ತಿನ್ನುವವನ ಬಯಕೆಯನು ಅದು
ಪೂರೈಸುತ್ತಾ
ಅವನವನ ಇಷ್ಟದಂತೆ ಹದಗೊಳ್ಳುತ್ತಿತ್ತು.
22 ಹಿಮ, ನೀರುಗಡ್ಡೆಗಳು ಬೆಂಕಿಯ ಬೇಗೆಗೆ
ಕರಗದೆ ಹೋದವು
ಹೀಗೆ ಶತ್ರುಗಳ ಬೆಳೆ ನಾಶಮಾಡಲು
ಚಂಡಮಾರುತದಲ್ಲೂ ಬೆಂಕಿ
ಉರಿಯಬಲ್ಲದು
ಮಳೆಯಲ್ಲೂ ಅದು ಸುಡಬಲ್ಲದು ಎಂದು
ಅವರು ತಿಳಿದುಕೊಳ್ಳುವಂತಾಯಿತು.
23 ಸಜ್ಜನರಿಗಾದರೋ ಆಹಾರ ಒದಗಿಸಲು
ಅಗ್ನಿ ತನ್ನ ಸಹಜ ಗುಣವನೇ
ಮರೆತುಬಿಟ್ಟಿತು !
24 ತನ್ನ ಸರ್ವೇಶ್ವರನಾದ ನಿಮಗೆ ಸೇವೆ
ಸಲ್ಲಿಸುವ ಸೃಷ್ಟಿಯು
ದುರ್ಜನರನು ದಂಡಿಸಲು ಬಹಳ
ತವಕಪಡುವುದು
ನಿಮ್ಮ ವಿಶ್ವಾಸಿಗಳಿಗೆ ಒಳಿತಾಗುವಂತೆ
ತಡೆದುಕೊಳ್ಳುವುದು.
25 ಎಂತಲೇ, ನಿಮ್ಮನು ಬೇಡುವವರ ಬಯಕೆ
ನೆರವೇರಿಸಲು
ಆ ಆಹಾರ ನಾನಾ ರೂಪ ತಾಳಿತು,
ಸರ್ವವನೂ ಪೋಷಿಸುವ ನಿಮ್ಮ
ದಯೆಗದು ಸಾಧ್ಯವಾಯಿತು.
26 ಹೇ ಸರ್ವೇಶ್ವರಾ, ಮಾನವನನು ಪೋಷಿಸು
ವುದು ಭೂಫಲಗಳ ಬೆಳೆಗಳಲ್ಲ.

ನಿಮ್ಮ ವಿಶ್ವಾಸಿಗಳನು ಉಳಿಸುವುದು
ನಿಮ್ಮ ವಾಕ್ಯ
ಇದನು ಕಲಿತುಕೊಳ್ಳುವಂತಾಯಿತು
ನೀವು ಪ್ರೀತಿಸುವ ಸಂತಾನ.
27 ಬೆಂಕಿಯಿಂದ ಸುಟ್ಟು ನಾಶವಾಗದ ಆಹಾರ
ಕಾಯ್ದು ಕರಗಿಹೋಯಿತು ಸೂರ್ಯನ
ಸೌಮ್ಯಕಿರಣ ಮಾತ್ರದಿಂದ.
28 ಇದರಿಂದ ನಾವು ಅರಿತುಕೊಳ್ಳಬೇಕಾದ
ಪಾಠವಿದು:
ಸೂರ್ಯೋದಯಕ್ಕೆ ಮೊದಲೇ ನಾವೆದ್ದು
ಸ್ತುತಿಸಬೇಕು ನಿಮ್ಮನು
ಬೆಳಕು ಮೂಡುತ್ತಿರುವಾಗಲೆ ನಾವು
ಬೇಡಿಕೊಳ್ಳಬೇಕು ನಿಮ್ಮನು.
29 ಹೌದು, ಕರಗಿಹೋಗುವುದು ಚಳಿಗಾಲದ
ಬಿಳಿಮಂಜಿನ ಹನಿಯಂತೆ
ಹರಿದುಹೋಗುವುದು ಪ್ರಯೋಜನವಿಲ್ಲದ
ನೀರಿನಂತೆ
ಉಪಕಾರಸ್ಮರಣೆ ಮಾಡದವನ ನಂಬಿಕೆ
ನಿರೀಕ್ಷೆ.

**ಕಾರ್ಗತ್ತಲು**

**17** ನಿಮ್ಮ ನ್ಯಾಯವಿಧಿಗಳು ದೇವಾ,
ಮಹತ್ತರವಾದುವು
ವಿವರಿಸಲು ಕಷ್ಟ ಸಾಧ್ಯವಾದುವು.
ಎಂದೇ, ಅಶಿಕ್ಷಿತ ಆತ್ಮಗಳು ಅಡ್ಡಹಾದಿ
ಹಿಡಿವುವು.
2 ದುರುಳರು ಪವಿತ್ರ ಜನಾಂಗವನು
ಅಧೀನದಲ್ಲಿರಿಸಿದ್ದೇವೆಂದು
ಭಾವಿಸಿದರು.
ಆದರೆ ತಾವೇ ಕಾರ್ಗತ್ತಲಿನ
ಸೆರೆಯಾಳಾದರು,
ಭೀಕರ ಇರುಳಿನ ಖೈದಿಗಳಾದರು.
3 ತಮ್ಮ ಗುಪತ್ತಪಾಪಗಳನು ಯಾರು ಪತ್ತೆ
ಹಚ್ಚಾರೆಂದುಕೊಂಡಿದ್ದರು
ಮರೆವು ಎಂಬ ಕಪ್ಪಾದ ತೆರೆಯು ಅವರನು
ಮುಚ್ಚಿಕೊಂಡಿತ್ತು.
ಆದರೆ ಭಯಂಕರ ದರ್ಶನಗಳ ನಿಮಿತ್ತ
ಕಂಗೆಟ್ಟು ದಿಗಿಲುಗೊಂಡರು.
4 ಆ ಭಯದಿಂದ ತಪ್ಪಿಸಿ ಕಾಪಾಡಲಿಲ್ಲ

ಅವರನು ಸೆರೆಹಿಡಿದಿದ್ದಾ ಗುಪ್ತಸ್ಥಳವು
ಬದಲಿಗೆ ಕಳವಳಗೊಳಿಸುವ ಸಪ್ಪಳಗಳು
ಕೇಳಿಸಿದವು ಸುತ್ತಲು
ಅವರಿಗೆ ಕಾಣಿಸಿಕೊಂಡವು ಆ ಪ್ರಸನ್ನ
ವಿಕಾರ ಮುಖದ ಬೇತಾಳಗಳು.
5 ಯಾವ ಬೆಂಕಿಯ ಬಲವೂ ಅವರಿಗೆ ಬೆಳಕು
ನೀಡಲಾರದೆ ಹೋಯಿತು
ಥಳಥಳಿಸುವ ನಕ್ಷತ್ರಗಳ ಜ್ವಾಲೆಗೂ
ಆ ರಾತ್ರಿಯನು ಬೆಳಗಿಸಲಾಗದೆ
ಹೋಯಿತು.
6 ತಾನಾಗಿಯೇ ಉರಿಯುತ್ತಿದ್ದ ದೊಡ್ಡ
ಪಂಜೊಂದು ಅವರ ಮುಂದಿತ್ತು
ದೃಷ್ಟಿಸಿ ನೋಡಲು ಅಸಾಧ್ಯವಾದಾ
ನೋಟಕ್ಕೆ ಅವರು ಅಳುಕಿದರು
ತಾವು ಕಂಡುದು ಕಾಣುವುದಕ್ಕಿಂತಲೂ
ಭಯಂಕರವಾಗಿದೆ ಎಂದುಕೊಂಡರು.
7 ಅವರ ಮಂತ್ರವಾದಿಗಳ ಕೈವಾಡವೆಲ್ಲವು
ಕುಸಿದು ಬಿದ್ದಿತು
ಅವರ ತಂತ್ರಮಂತ್ರಗಳಾಂಬರವು
ನಿಂದೆ ಅವಮಾನಕ್ಕೀಡಾಯಿತು.
8 ಸಂಕಟಪಡುವವರ ಭಯಬಾಧೆಗಳನು
ದೂರವಾಗಿಸುವುದಾಗಿ ಹೇಳಿದ್ದರು
ಆದರೀಗ ತಾವೇ ನಗೆಪಾಟಲಿಗೆ
ಈಡಾಗುವಷ್ಟು ಅಂಜಿಕೊಂಡಿದ್ದರು.
9 ಅವರನು ಗಾಬರಿಪಡಿಸುವಂಥ
ಘಟನೆ ಯಾವುದು ನಡೆಯದಿದ್ದರೂ
ಕ್ರಿಮಿಕೀಟಗಳ ಹರಿದಾಟಕ್ಕೂ, ಹಾವುಗಳ
ಬುಸುಗುಟ್ಟುವಿಕೆಗೂ ಬೆದರಿದರು.
10 ಯಾವ ವಿಧದಲ್ಲೂ ತಪ್ಪಿಸಿಕೊಳ್ಳಲಾಗದ
ಗಾಳಿಯನು ಕೂಡ
ನೋಡಲೊಲ್ಲದೆ ನಡುನಡುಗಿ ಸತ್ತರು
ಭಯಭೀತಿಯಿಂದ.
11 ಮನಸ್ಸಾಕ್ಷಿ ಖಂಡಿಸುವ ದುಷ್ಟತನವು
ಸಹಜವಾಗಿ ತರುತ್ತದೆ ಅಂಜಿಕೆಯನ್ನೇ
ಅದು ಮನಸ್ಸಾಕ್ಷಿಯ ಒತ್ತಡದಿಂದ
ಮುಂದಿಡುತ್ತದೆ ಕೆಟ್ಟದ್ದನ್ನೇ.
12 ವಿವೇಕ ನೀಡುವ ನೆರವನು ಕೈಬಿಡುವುದು,
ಅಂಜಿಕೆಯೆಂಬುದು ಒಂದೇ ಆಗಿರುವುವು.
13 ವಿವೇಕದ ಮೇಲಿರುವ ನಂಬಿಕೆಯನು
ಕಳೆದುಕೊಂಡಷ್ಟು

ಕಷ್ಟಗಳಿಗೆ ಕಾರಣ ತಿಳಿಯದಿರುವುದು
ಸಂಕಟವಾಗುವುದು ಮತ್ತಷ್ಟು.
14 ಶಕ್ತಿಯಿಲ್ಲದ ಬಲಹೀನ ಪಾತಾಳದಿಂದ
ಬಂದ ಆ ಕತ್ತಲಲಿ
ಅವರೆಲ್ಲರು ಒಂದಾಗಿದ್ದರು ಅದೇ
ನಿದ್ರೆಯಲಿ.
15 ಒಮ್ಮೆ ಭಯಾನಕ ರೂಪಗಳನ್ನು ಕಂಡು
ಬೆಚ್ಚುಬೀಳುತ್ತಿದ್ದರು
ಇನ್ನೊಮ್ಮೆ ಎದೆಗುದಿಯಿಂದ
ಕಳವಳಪಡುತ್ತಿದ್ದರು.
ಅಂಥ ಆಕಸ್ಮಿಕ ಹಾಗು ಅನಿರೀಕ್ಷಿತ ಭಯ
ಅವರ ಮೇಲೆ ಬಂದಿತ್ತು.
16 ಹೀಗೆ ಪ್ರತಿಯೊಬ್ಬನು ಇದ್ದಲ್ಲಿಯೇ
ಬಿದ್ದುಕೊಂಡಿದ್ದನು
ಕಬ್ಬಿಣದ ಕಂಬಿಗಳಿಲ್ಲದ ಸೆರೆಯಲಿ
ಬಂಧಿತನಾಗಿದ್ದನು.
17 ರೈತನಾಗಲಿ, ಕುರುಬನಾಗಲಿ, ಅಡವಿ
ಯಲ್ಲಿನ ಆಳಾಗಲಿ, ಎಲ್ಲರು
ತಪ್ಪಿಸಿಕೊಳ್ಳಲಾಗದಂಥ ಬಂಧನವನು
ಅನುಭವಿಸುತ್ತಿದ್ದರು
ಎಲ್ಲರನು ಕತ್ತಲೆಂಬ ಒಂದೇ
ಸರಪಣಿಯಿಂದ ಬಿಗಿಯಲಾಗಿತ್ತು.
18 ಸಿಳ್ಳು ಗಾಳಿಯಾಗಲಿ, ಹರಿವ ಪ್ರವಾಹದ
ಭೋರ್ಗರೆತವಾಗಲಿ
ಹರಡಿದ ಕೊಂಬೆಗಳ ಮೇಲಿನ ಹಕ್ಕಿಗಳ
ಇಂಚರವಾಗಲಿ,
19 ಕೆಳಕ್ಕೆ ಉರುಳಿದ ಬಂಡೆಗಳ ಕರ್ಕಶ
ನಾದವಾಗಲಿ
ಕಣ್ಣಿಗೆ ಕಾಣದಂತೆ ಜಿಗಿದು ಓಡಾಡುವ
ಪ್ರಾಣಿಗಳ ಸದ್ದಾಗಲಿ
ಕಾಡುಮೃಗಗಳು ಗೂಳಿಡುವ ಗರ್ಜನೆ ಆಗಲಿ
ಗುಡ್ಡದ ಬಿರುಕುಗಳಿಂದ ಬರುವ
ಮಾರ್ದನಿಯಾಗಲಿ,
ಇವೆಲ್ಲವು ಸಾಕಾಗಿದ್ದವು ಅವರನು
ಮೂರ್ಛೆಗೊಳಿಸಲು ಭಯಹುಟ್ಟಿಸಿ.
20 ಜಗದ ಬೇರೆ ಕಡೆಯಲ್ಲಾದರೋ
ತಿಳಿಬೆಳಕು ಹರಡಿತ್ತು
ನಿರಾತಂಕ ಕೆಲಸಕಾರ್ಯಗಳಲ್ಲಿ ತೊಡಗಿದ್ದರು
ಜನರೆಲ್ಲರು.
21 ಇವರ ಮೇಲೆ ಮಾತ್ರ ಕವಿದಿತ್ತು

ಕಾರ್ಗತ್ತಲು
ಮುಂದೆ ಬರಲಿರುವ ಗಾಢಕತ್ತಲ
ಛಾಯೆಯಾಗಿತ್ತದು
ಇವರು ತಮಗೆ ತಾವೇ ಹೊರಲಾಗದ
ಹೊರೆಯಾಗಿದ್ದರು ಆ ಕತ್ತಲಿಗಿಂತಲು.

### ಇಸ್ರಯೇಲರಿಗೆ ಬೆಳಕು

**18** ನಿಮ್ಮ ಪವಿತ್ರ ಜನರಿಗಾದರೋ
ದೇವಾ, ಪ್ರಕಾಶಮಯ ಬೆಳಕಿತ್ತು.
ಈಜಿಪ್ಟರು ಅವರ ಸ್ವರ ಕೇಳಿದ್ದರೂ
ನೋಡಿರಲಿಲ್ಲ ಅವರ ರೂಪವನು
ತಮ್ಮ ಹಾಗೆ ಸಂಕಟಕ್ಕೀಡಾಗದ ಅವರನು
ಧನ್ಯರೆಂದು ಎಣಿಸಿದ್ದರು.
2 ಹಿಂದೆ ನಿಮ್ಮಾ ಜನರಿಗೆ ಅವರು ಮಾಡಿದ
ಅನ್ಯಾಯಕ್ಕೆ
ಪ್ರತೀಕಾರ ಮಾಡಲಿಲ್ಲವೆಂದು ಸಲ್ಲಿಸಿದರು
ಕೃತಜ್ಞತೆ.
3 ಕತ್ತಲೆಗೆ ಪ್ರತಿಯಾಗಿ ಬೆಳಗಿಸಿದಿರಿ
ನಿಮ್ಮ ಜನರಿಗೆ ಅಗ್ನಿಸ್ತಂಭವೊಂದನು.
ಅಪರಿಚಿತಾ ಪ್ರಯಾಣದಲ್ಲಿ ಅವರನು
ಅದು ಮುನ್ನಡೆಸಿತು
ಕೈಗೊಂಡಿದ್ದಾ ಪ್ರವಾಸದಲಿ ಅದವರಿಗೆ
ಪ್ರಭಾಕರನಂತಿತ್ತು.
4 ಈಜಿಪ್ಟರಾದರೋ ಬಂಧಿತರಾಗಿದ್ದುದು
ಉಚಿತವಾಗಿತ್ತು ಬೆಳಕಿಲ್ಲದಾ
ಕತ್ತಲೆಯಲಿ.
ಕಾರಣ–ಯಾರ ಮೂಲಕ ನಿಮ್ಮ
ನಿಮಯದ ಬೆಳಕು ಜಗಕ್ಕೆ
ಬರಬೇಕಾಗಿತ್ತೋ
ಆ ನಿನ್ನ ಪುತ್ರ ಪುತ್ರಿಯರನು ಅವರು
ಇಟ್ಟಿದ್ದರು ಬಂಧನದಲಿ.

### ಈಜಿಪ್ಟರ ಚೊಚ್ಚಲ ಮಕ್ಕಳು

5 ದೇವಜನರ ಮಕ್ಕಳನು ಸಂಹರಿಸಲು
ಅವರು ಯೋಚಿಸಿದರು
ಬಿಸಾಡಲಾದ ಒಂದೇ ಒಂದು ಕೂಸು
ಸುರಕ್ಷಿತವಾಯಿತು.
ಅಂಥವರನ್ನು ದಂಡಿಸಲು ಅವರ ಅನೇಕ
ಮಕ್ಕಳನು ದೇವಾ, ನೀವು

ತೆಗೆದುಕೊಂಡಿರಿ.
ಅದು ಮಾತ್ರವಲ್ಲ, ಅವರೆಲ್ಲರನು ಒಟ್ಟಿಗೆ
ಮಹಾಸಾಗರದಲ್ಲಿ ಮುಳುಗಿಸಿದಿರಿ.
6 ಆ ರಾತ್ರಿಯ ಘಟನೆಗಳನು ನಮ್ಮ
ಪೂರ್ವಜರಿಗೆ ಮೊದಲೇ ತಿಳಿಸಲಾಗಿತ್ತು
ಎಂದೇ ಅವರು ನಂಬಿದ್ದ ವಾಗ್ದಾನಗಳಿಂದ
ಧೈರ್ಯತಂದುಕೊಂಡರು.
7 ಹೀಗೆ ಶತ್ರುಗಳ ಅಳಿವನು, ಸಜ್ಜನರ
ಉದ್ಧಾರವನು
ನಿಮ್ಮ ಜನರು ನಿರೀಕ್ಷಿಸಿದ್ದರು.
8 ಯಾವ ಸಾಧನಗಳಿಂದ ಶತ್ರುಗಳಿಗೆ ನೀವು
ಮುಯ್ಯಿ ತೀರಿಸಿದಿರೋ
ಅವುಗಳಿಂದಲೇ ನಮ್ಮನ್ನು ತಮ್ಮ ಬಳಿಗೆ
ಕರೆದು ಗೌರವಿಸಿದಿರಿ.
9 ಸಜ್ಜನರ ಸ್ವಂತ ಕುವರರು
ಬಲಿಯನ್ನರ್ಪಿಸಿದರು ರಹಸ್ಯವಾಗಿ
ದೇವನಿಯಮದ ನಿಬಂಧನೆಗಳನು
ಅಂಗೀಕರಿಸಿದರು ಒಮ್ಮನಸ್ಸಾಗಿ.
ಅಂತೆಯೇ ಹೆತ್ತವರು ತಾವು
ದೇವಜನರೆಂದು ಒಪ್ಪಿಕೊಂಡರು
ಸುಖ-ಸಂಕಟಗಳಲ್ಲಿ ಭಾಗಿಗಳೆಂದು
ಹಾಡಿದರು ಪೂರ್ವಜರ ಸ್ತುತಿಗೀತೆಯನು.
10 ಅತ್ತ ಶತ್ರುಗಳ ಕರ್ಕಶ ಧ್ವನಿ ಕೇಳಲಾಗಿ
ಗೋಳಿಡುವ ರೋದನ ಹಬ್ಬಿತು ಬೆತ್ತಲಾಗಿ.
11 ದಾಸನಿಗೂ ದಣಿಗೂ ಒಂದೇ
ದಂಡನೆಯಾಗಿತ್ತು
ಅರಸನಿಗೂ ಜನಸಾಮಾನ್ಯನಿಗೂ ಒಂದೇ
ವಿಪತ್ತು ಬಂದಿತ್ತು.
12 ಅವರೆಲ್ಲರು ಒಂದೇ ವಿಧವಾದ ಸಾವಿಗೆ
ತುತ್ತಾಗಿದ್ದರು
ಎಣಿಸಲಾಗದಷ್ಟು ಶವಗಳು ರಾಶಿ
ಬಿದ್ದಿದ್ದವು.
ಹೂಣಿಡುವುದಕ್ಕೂ ಸಾಕಷ್ಟು ಜನ
ಬದುಕಿರಲಿಲ್ಲ
ಒಂದೇ ಪೆಟ್ಟಿಗೆ ಅವರ ಜೇಷ್ಠರೆಲ್ಲಾ
ಮಡಿದಿದ್ದರಲ್ಲಾ !
13 ಮಂತ್ರ ತಂತ್ರಗಳಿಗೆ ಮಾರುಹೋಗಿ
ನಂಬಲಿಲ್ಲ ಅವರು ಯಾವುದನು
ತಮ್ಮ ಚೊಚ್ಚಲು ಮಕ್ಕಳಿಗೆ ಬಂದೊದಗಿದ
ನಾಶನ ಮುಂದಿಟ್ಟು

ಒಪ್ಪಿಕೊಂಡರು, ಈ ಜನ ದೇವರ ಸಂತಾನ
ಎಂದು.
14 ಸೌಮ್ಯವಾದ ಮೌನ ಸಮಸ್ತವನು
ಆವರಿಸಲು
ನಟ್ಟಿರುಳು ವೇಗವಾಗಿ ಚಲಿಸಿ ಬಂದಿರಲು,
15 ನಿಮ್ಮ ಸರ್ವಶಕ್ತ ವಾಣಿ ತನ್ನ ರಾಜ
ಸಿಂಹಾಸನ ಬಿಟ್ಟು
ಪ್ರಬಲ ಯುದ್ಧವೀರನಂತೆ
ಸ್ವರ್ಗದಿಂದ ಜಿಗಿದು
ನಾಶನಕ್ಕೆ ಗುರಿಯಾದ ನಾಡಿನೊಳಕ್ಕೆ
ಬಂದಿತು.
16 ಕಟ್ಟುನಿಟ್ಟಾದ ನಿನ್ನಾಜ್ಞೆಯೆಂಬ ಹದವಾದ
ಕತ್ತಿಯನು ಅದು ಹಿಡಿದುನಿಂತಿತ್ತು
ಎಲ್ಲವನು ಸಾವಿನಿಂದ ತುಂಬಿಸಿ, ನೆಲದ
ಮೇಲೆ ನಿಂತಿತ್ತು;
ಆದರೂ ಆಗಸವನ್ನೇ ಮುಟ್ಟುತ್ತಿತ್ತು.
17 ಥಟ್ಟನೆ ಭೀಕರ ಸ್ವಪ್ನಗಳಿಂದ ಆ ಜನರು
ದಂಗುಬಡಿದಂತಾದರು
ಅನಿರೀಕ್ಷಿತ ಭಯಭೀತಿಯು ಅವರನು
ಆವರಿಸಿತು.
18 ಒಬ್ಬನು ಇಲ್ಲಿ, ಇನ್ನೊಬ್ಬನು ಅಲ್ಲಿ
ಅರೆಜೀವಿಯಾಗಿ ಬಿದ್ದುಕೊಂಡನು
ತನ್ನ ಮರಣದ ಕಾರಣವನು ರುಜು
ಪಡಿಸುತ್ತಿದ್ದನು.
19 ತಮ್ಮ ಸಂಕಟಕೆ ಕಾರಣವನು ತಿಳಿಯದೆ
ಅವರು ನಾಶವಾಗಬಾರದೆಂದು
ಅವರನು ಗಾಬರಿಗೊಳಿಸಿದ ಸ್ವಪ್ನಗಳೇ
ಅದನು ಮುನ್ಸೂಚಿಸಿದ್ದವು.

ಆರೋನನ ಪ್ರಾರ್ಥನೆ–ಇಸ್ರಯೇಲರ ರಕ್ಷಣೆ

20 ದೇವಜನರಿಗೂ ಬಂದಿತು ಸಾವಿನ ಬವಣೆ
ಅನೇಕರು ಮಡಿದರು ಮರುಭೂಮಿಯಲೆ
ಆದರೆ ಬಹುಕಾಲ ಉಳಿಯಲಿಲ್ಲ
ನಿನ್ನಾ ಕೋಪಾವೇಶನೆ.
21 ಕಾರಣ, ನಿರ್ದೋಷಿ ಮನುಷ್ಯನೊಬ್ಬನು
ಮುಂದೆ ಬಂದನು ತ್ವರೆಯಾಗಿ
ಪ್ರಾರ್ಥನೆಯನು, ದೋಷಪರಿಹಾರಕ
ಧೂಪವನು ಮಾಡಿಕೊಂಡನು
ತನ್ನ ಸೇವಾಯುಧಗಳನ್ನಾಗಿ.
ನಿಮ್ಮ ಕೋಪದೆದುರು ನಿಂತು,

ಆ ವಿಪತ್ತನ್ನು ಶಮನ ಮಾಡಿದನು
ತಾನು ನಿಮ್ಮ ಪರಿಚಾರಕನೆಂದು
ತೋರಿಸಿಕೊಂಡನು.
22 ಅವನು ಆ ಉಪದ್ರವವನು ಶಮನ
ಮಾಡಿದ್ದು ತನ್ನಿಂದಲ್ಲ,
ತನ್ನ ದೇಹಬಲದಿಂದಲ್ಲ, ಶಸ್ತ್ರ ಪ್ರಯೋಗ
ದಿಂದಲೂ ಅಲ್ಲ;
ಪಿತೃಗಳಿಗೆ ಮಾಡಿದ ವಾಗ್ದಾನ
ಒಡಂಬಡಿಕೆಗಳನು
ನೆನಪಿಗೆ ತಂದುಕೊಟ್ಟನು
ವಾಕ್ಯದ ಮೂಲಕವೇ ಸಂಹಾರಕ
ದೂತನನು ಶಮನಮಾಡಿದನು.
23 ಸತ್ತವರ ಶವಗಳು ಒಂದರ ಮೇಲೊಂದು
ರಾಶಿಯಾಗಿ ಬಿದ್ದಿರುವಾಗ
ಅವನು ನಡುವೆ ನಿಂತು ತಡೆಹಿಡಿದನು
ಕೋಪವನು
ಬದುಕಿರುವವರ ಕಡೆಗೆ ಅದು ಹರಿಯದಂತೆ
ಹಾದಿಯನು ಕಟ್ಟಿದನು.
24 ಅವನು ಧರಿಸಿದ್ದ ನಿಲುವಂಗಿಯ ಮೇಲೆ
ಇಡೀ ವಿಶ್ವ ಚಿತ್ರಿತವಾಗಿತ್ತು
ರತ್ನಗಳ ನಾಲ್ಕು ಸಾಲುಗಳಲಿ ಪಿತೃಗಳ
ಗೌರವ ನಾಮವನು ಕೆತ್ತಲಾಗಿತ್ತು
ಅವನ ತಲೆಯ ಮೇಲಿದ್ದ ಪೇಟದಲಿ
ನಿಮ್ಮ ಮಹತ್ವವೇ ಬಿಂಬಿಸಿತ್ತು.
25 ಇದನ್ನು ಕಂಡ ಹಿಮ್ಮೆಟ್ಟಿದನು
ಸಂಹಾರಕನು ಭಯಪಟ್ಟು
ನಿಮ್ಮ ಕೋಪದ ಬಿಸಿ ಅವನಿಗೆ ತಟ್ಟಿದ್ದೇ
ಸಾಕಾಗಿತ್ತು.

### ಕೆಂಪು ಸಮುದ್ರ

**19** ಕನಿಕರವಿಲ್ಲದಾ ಕೋಪ
ದುರುಳರನು ಕಾಡಿತು
ಕೊನೆಯವರೆಗೂ
ದೇವಾ, ಮೊದಲೇ ನೀವು ಅರಿತಿದ್ದಿರಿ
ಅವರು ಮಾಡುವುದೇನೆಂಬುದನು.
2 ನಿಮ್ಮ ಜನರಿಗೆ ನಾಡನು ಬಿಟ್ಟುಹೋಗಲು
ಅನುಮತಿಕೊಟ್ಟು
ತ್ವರಿತವಾಗಿ ಹೋಗಬೇಕೆಂದು ಅವರನು
ಬೀದಿಗೆ ಅಟ್ಟಿಬಿಟ್ಟು

ಮತ್ತೆ ಮನಬದಲಾಯಿಸಿಕೊಂಡು
ಅವರನು ಬೆನ್ನಟ್ಟುವರೆಂದು ನಿಮಗೆ
ತಿಳಿದಿತ್ತು.
3 ಈಜಿಪ್ಟರು ಸತ್ತವರ ಸಮಾಧಿ ಬಳಿ
ಕಣ್ಣೀರಿಡುತ್ತಾ ಶೋಕಾಚರಣೆಯಲ್ಲಿ
ಇದ್ದಾಗಲು
ಹುಚ್ಚು ಯೋಜನೆಯೊಂದನು
ಮಾಡಿಕೊಂಡರು:
ಯಾರನು ಬೇಡಿಕೊಂಡರೋ ಬಿಟ್ಟು
ಹೋಗಬೇಕೆಂದು
ಅವರನೇ ಬೆನ್ನಟ್ಟಿದರು
ಓಡಿಹೋದರೆಂದು.
4 ಯಾವ ದಂಡನೆಗೆ ಅವರು
ಪಾತ್ರರಾಗಿದ್ದರೋ
ಅದೇ ದಂಡನೆ ಅವರನ್ನೆಳೆದು ತಂದಿತು
ಈ ಕಡೆಗೆ:
ಈವರೆಗೆ ಅನುಭವಿಸಿದ್ದೆಲ್ಲವನು
ಮರೆವಂತೆ ಮಾಡಿತು.
ಇನ್ನೂ ಕಡಿದಾದ ಶಿಕ್ಷೆಯನು
ಸವಿಯುವಂತೆ ಮಾಡಿತು.
5 ನಿಮ್ಮ ಜನರು ಅದ್ಭುತಕರ ಮಾರ್ಗದಲಿ
ನಡೆದು ಹೋಗುವಂತಾಯಿತು
ಶತ್ರುಗಳು ವಿಚಿತ್ರ ಮರಣವನು
ಅನುಭವಿಸುವಂತಾಯಿತು.

**ದೇವಜನರ ವಿಮೋಚನೆ**

6 ನಿಮ್ಮ ದಾಸರು ದೇವಾ,
ಹಾನಿಗೀಡಾಗದಂತೆ
ತಲೆಬಾಗಿತು ಸಮಗ್ರ ಸೃಷ್ಟಿ
ನಿಮ್ಮ ಆಜ್ಞೆಗೆ
ಬದಲಾಯಿಸಿಕೊಂಡಿತು
ತನ್ನ ಸಹಜ ರೂಪವನೆ.
7 ಪಾಳೆಯಕ್ಕೆ ನೆರಳು ನೀಡಲು ಮೇಘ
ಕವಿಯಿತು
ಜಲರಾಶಿಯಿದ್ದಲ್ಲಿ ಒಣನೆಲವು
ಮೇಲೆದ್ದಿತು
ಕೆಂಪು ಸಮುದ್ರದ ನಡುವೆ ಸುರಕ್ಷಿತ
ಹೆದ್ದಾರಿ ಕಾಣಿಸಿತು
ಮೊರೆಯುತ್ತಿದ್ದ ಅಲೆಗಳ ಮಧ್ಯೆ
ಹುಲ್ಲುಗಾವಲುಂಟಾಯಿತು.

8 ಒಂದೇ ಸಮೂಹದಂತೆ ನಿಮ್ಮ
ಹಸ್ತಾಶ್ರಯ ಪಡೆದ ಜನರು
ನಾನಾ ಅದ್ಭುತ ಕಾರ್ಯಗಳನು ನೋಡಿ,
ಆ ಸಮುದ್ರವನೆ ದಾಟಿದರು.
9 ತಮ್ಮನ್ನು ಬಿಡುಗಡೆ ಮಾಡಿದ ನಿಮ್ಮನು
ಹೇ ಸರ್ವೇಶ್ವರಾ, ಕೊಂಡಾಡಿದರು
ಕುರಿಮರಿಗಳಂತೆ ಕುಣಿದಾಡಿದರು,
ಬಿಚ್ಚಿದ ಕುದುರೆಗಳಂತೆ ಓಡಾಡಿದರು.
10 ನೆನಪಿಗೆ ತಂದುಕೊಂಡರು ತಮ್ಮ
ಪ್ರವಾಸಕಾಲದಲಿ ನಡೆದವುಗಳನು
ದನಕರುಗಳಿಗೆ ಬದಲಾಗಿ ಮಿಡಿತೆಗಳನಿತ್ತ
ಭೂಮಿಯನು
ಮೀನುಗಳಿಗೆ ಪ್ರತಿಯಾಗಿ ಕಪ್ಪೆಗಳನಿತ್ತ
ನದಿಯನು.
11 ಬಳಿಕ ಮೃಷ್ಟಾನ್ನವನು ಕೋರಿಕೊಳ್ಳಲು
ಕಾಣಿಸಿಕೊಂಡವು ಹೊಸತರದ ಹಕ್ಕಿಗಳು.
12 ಅವರ ಆಶೆಯನು ಪೂರೈಸಲು
ಸಮುದ್ರದಿಂದೇರಿ ಬಂದವು ಲಾವಕ್ಕಿಗಳು.

### ಶತ್ರುಗಳಿಗಾದ ಶಿಕ್ಷೆ

13 ದುರುಳರ ಮೇಲಾದರೋ ಎರಗಿತು
ದಂಡನೆ
ಎರಗಿತದು ಗುಡುಗಿನಂಥ ಅಬ್ಬರದ
ಮುಂಗುರುತೊಡನೆ.
ಅತಿಥಿಗಳ ಸಂಗಡ ಹಗೆತನದಿಂದ
ನಡೆದುಕೊಂಡದ್ದರಿಂದ
ಅನುಭವಿಸಿದರವರು ನ್ಯಾಯವಾದ ಕಷ್ಟ,
ಆ ದುಷ್ಟತನದ ನಿಮಿತ್ತ.
14 ಸೊದೋಮಿನವರು ಸೇರಿಸಿಕೊಳ್ಳಲಿಲ್ಲ
ಪರಕೀಯರು ಬಂದಾಗ
ಈಜಿಪ್ಟಿನವರಾದರೋ ಗುಲಾಮರನ್ನಾಗಿಸಿ
ಕೊಂಡರು ಹಿತೈಷಿಗಳು ಬಂದಾಗ.
15 ಪರಕೀಯರನು ಶತ್ರುಗಳಂತೆ
ಭಾವಿಸಿದ್ದರಿಂದ
ಶಿಕ್ಷೆಗೆ ಗುರಿಯಾದರವರು ನಾನಾ
ವಿಧದಿಂದ.
16 ಇವರಾದರೋ ತಮಗೆ ಸಮಾನ
ಹಕ್ಕಿನವರನು
ಮೊದಲು ಸಂತಸದಿಂದ
ಬರಮಾಡಿಕೊಂಡರಾದರು

ತರುವಾಯ ಭಯಂಕರವಾಗಿ ಹಿಂಸಿಸಿದರು.
17 ನೀತಿವಂತನ ಮನೆಯ ಮುಂದೆ
ಸೊದೋಮಿನವರು ದೃಷ್ಟಿಹೀನರಾದಂತೆ
ಪ್ರತಿಯೊಬ್ಬನು ಬಾಗಿಲ ಮೂಲಕ
ದಾರಿಹುಡುಕುತ್ತಾ ತಡವರಿಸಿದಂತೆ
ಇವರನು ಕಾರ್ಗತ್ತಲು ಆವರಿಸಿ
ಗುರಿಪಡಿಸಿತು ದೃಷ್ಟಿಹೀನತೆಗೆ.

**ದೇವರ ಅದ್ಭುತ ಶಕ್ತಿ**

18 ಕಿನ್ನರಿಯ ತಂತಿಗಳು ರಾಗದ ಧಾಟಿಯನು
ಬದಲಾಯಿಸುವಂತೆ
ಪಂಚಭೂತಗಳು ಮಾರ್ಪಡಿಸಿಕೊಂಡವು
ತಮ್ಮ ಗುಣಲಕ್ಷಣಗಳನೆ
ಇದ ಗಮನಿಸಬಹುದು ಸಂಭವಿಸಿದ
ಘಟನೆಗಳಲೆ.
19 ಭೂಚರ ಪ್ರಾಣಿಗಳಾದವು ಜಲಚರ
ಪ್ರಾಣಿಗಳಾಗಿ
ಜಲಚರ ಪ್ರಾಣಿಗಳು ಮಾರ್ಪಟ್ಟವು
ಭೂಚರ ಪ್ರಾಣಿಗಳಾಗಿ.
20 ಬೆಂಕಿ ಸ್ವಾಭಾವಿಕವಾಗಿ ಉರಿಯಿತು
ನೀರಿನಲ್ಲೂ
ನಂದಿಸುವ ತನ್ನ ಗುಣಧರ್ಮವನಾ ನೀರು
ಮರೆತುಬಿಟ್ಟಿತು.
21 ಜ್ವಾಲೆಗಳು ಸುಡಲಿಲ್ಲ ತಮ್ಮೊಳು
ನಡೆದಾಡಿದಾ ಮೃದು ದೇಹಗಳನು
ಕರಗಿಸಲಿಲ್ಲ ಮಂಜಿನಂತೆ ಸುಲಭವಾಗಿ
ಕರಗಬಲ್ಲ ಅಮೃತಾಹಾರವನು.
22 ಸರ್ವೇಶ್ವರಾ, ಎಲ್ಲ ವಿಧದಲು ಉದ್ಧರಿಸಿ
ಘನಪಡಿಸಿದಿರಿ ನಿಮ್ಮ ಜನರನು
ಉಪೇಕ್ಷಿಸದೆ ಅವರಿಗೆ ನೆರವಾದಿರಿ,
ಎಲ್ಲಾ ಕಾಲದಲು, ಸ್ಥಳದಲು.